# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ





ಭಾರತ, ಅಮೇರಿಕಾ ಮತ್ತು ಜಪಾನ್ ನೌಕಾಪಡೆಗಳು ಜಂಟಿಯಾಗಿ ನಡೆಸುತ್ತಿರುವ ಮಲಬಾರ್ ಸಮರಾಭ್ಯಾಸದಲ್ಲಿ ಯುದ್ಧನೌಕೆಯ ಮೇಲೆ ಸನ್ನದ್ಧ ಸ್ಥಿತಿಯಲ್ಲಿರುವ ಭಾರತೀಯ ನೌಕಾಪಡೆಯ ಸೀ ಕಿಂಗ್ ಹೆಲಿಕಾಪ್ಟರ್.

ಸಂಪುಟ : 38 ಸಂಚಿಕೆ : 24 ಹೇಮಲಂಬಿ–ಶ್ರಾವಣ ಕಲಿಯುಗಾಬ್ದ 5119 1–8–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ‘ಮೇಡ್ ಇನ್ ಚೈನಾ’ ಬಹಿಷ್ಕರಿಸಿ – ಸ್ವದೇಶಿ ವಸ್ತು ಬಳಸಿ

ವಿಸ್ತರಣಾವಾದಿ ಚೀನಾದ ರಣತಂತ್ರವೇ ಹೀಗೆ. ಆಗಾಗ ಗಡಿಯಲ್ಲಿ ತಗಾದೆ ತೆಗೆಯುವುದು, ಸೇನೆಯನ್ನು ಗಡಿಯಲ್ಲಿ ಒಳನುಗ್ಗಿಸಿ ಹೆದರಿಸಲು ಯತ್ನಿಸುವುದು, ಬೇರೆ ದೇಶಕ್ಕೆ ಸೇರಿದ ಭೂಭಾಗದ ಮೇಲೆ ತನ್ನ ಹಕ್ಕನ್ನು ಪ್ರತಿಪಾದಿಸುವುದು. ಇನ್ನೊಂದು ದೇಶ ಎದುರಿಸಲು ಹಿಂಜರಿದರೆ ಅಥವಾ ಒತ್ತಡಕ್ಕೆ ಬಾಗಿದರೆ ಇನ್ನೂ ಹೆದರಿಸುವುದು. ಭೂಭಾಗದ ಮೇಲೆ ಕಬ್ಜಾ ಮಾಡಿಕೊಳ್ಳುವುದು. ತನಗೆ ಬೇಕಾದ ಲಾಭ ಮಾಡಿಕೊಳ್ಳುವುದು. ಇದು ಕಮ್ಯುನಿಸ್ಟ್ ಚೀನಾದ ವ್ಯವಸ್ಥಿತ ಯೋಜನಾಬದ್ಧ ನೀತಿ. ಜಪಾನ್‌ನ ಸೆನ್‌ಕಾಕು ದ್ವೀಪ ಹಾಗೂ ರಷ್ಯಾದ ಗಡಿವಿವಾದದಲ್ಲೂ ಚೀನಾ ಹೀಗೆ ನಡೆದುಕೊಂಡಿತ್ತು. ಆದರೆ ಆ ಸಮಯದಲ್ಲಿ ರಷ್ಯಾ ಹಾಗೂ ಜಪಾನ್‌ಗಳು ಚೀನಾಕ್ಕಿಂತ ಬಲಶಾಲಿಯಾಗಿ ಖಡಕ್ಕಾಗಿ ನಡೆದುಕೊಂಡಿದ್ದರಿಂದ ಚೀನಾ ತನ್ನ ಬಾಲ ಮುದುಡಿಸಿಕೊಂಡು ಹಿಂತೆಗೆದಿತ್ತು. ಈಗ ಭೂತಾನ್ ಗಡಿ ಡೋಕಲಮ್ ಪ್ರದೇಶದ ಒತ್ತುವರಿಯಲ್ಲಿಯೂ ಚೀನಾ ಮಾಡುತ್ತಿರುವುದು ಇದನ್ನೇ.




ಭಾರತದ ವಿದೇಶಿ ವ್ಯಾಪಾರದಲ್ಲಿ ಅತಿ ಹೆಚ್ಚು ಪಾಲು ಇರುವುದು ಚೀನಾಕ್ಕೆ. ಭಾರತ ಮತ್ತು ಚೀನಾ ವಿದೇಶಿ ವ್ಯಾಪಾರದ ಒಟ್ಟು ಮೊತ್ತ ಸುಮಾರು 72 ಬಿಲಿಯನ್ ಡಾಲರ್‌ಗಳು. ಆದರೆ ಇದು ಚೀನಾದ ಪರವೇ ಹೆಚ್ಚಿದೆ. 2016–17ನೇ ಸಾಲಿನಲ್ಲಿ ಚೀನಾದಿಂದ ಭಾರತಕ್ಕೆ 61.3 ಬಿಲಿಯನ್ ಡಾಲರ್(4 ಲಕ್ಷ ಕೋಟಿ ರೂ) ಮೌಲ್ಯದ ವಸ್ತುಗಳು ಆಮದಾದರೆ, ಭಾರತದಿಂದ ಕೇವಲ 10.2 ಬಿಲಿಯನ್ (60 ಸಾವಿರ ಕೋಟಿ ರೂ)ಮೌಲ್ಯದ ವಸ್ತುಗಳು ರಫ್ತಾದವು. ಒಟ್ಟು ವ್ಯಾಪಾರಿ ಕೊರತೆ 51.1 ಬಿಲಿಯನ್ ಅಂದರೆ ಬರೋಬ್ಬರಿ 3.2 ಲಕ್ಷ ಕೋಟಿಗಳಿಗಿಂತ ಹೆಚ್ಚು. ಒಂದು ವರ್ಷ ಭಾರತದೊಂದಿಗಿನ ವ್ಯಾಪಾರದಿಂದ ಗಳಿಸಿದ ಹಣ ಚೀನಾ ಪಾಕಿಸ್ತಾನ ಆರ್ಥಿಕ ಕಾರಿಡಾರ್ ಯೋಜನೆಗೆ ಸಾಕು. (ಇದರ ಆರಂಭಿಕ ಯೋಜನಾ ಮೊತ್ತ 46 ಬಿಲಿಯನ್ ಡಾಲರ್‌ಗಳು).

ಅಷ್ಟಾಗಿಯೂ ಚೀನಾದಿಂದ ಆಮದಾಗುವ ಹಾಗೂ ಭಾರತದಿಂದ ಚೀನಾಕ್ಕೆ ರಫ್ತಾಗುವ ವಸ್ತುಗಳನ್ನು ನೋಡಿದರೆ ದಂಗಾಗಬಹುದು. ಚೀನಾದಿಂದ ಇಲೆಕ್ಟ್ರಾನಿಕ್ಸ್ ವಸ್ತುಗಳು, ಮಶೀನರಿ ಮತ್ತು ಭಾಗಗಳು, ಕೆಮಿಕಲ್, ಪ್ಲಾಸ್ಟಿಕ್ ವಸ್ತುಗಳು ಮೊದಲಾದ ನೇರ ಮಾರುಕಟ್ಟೆಗೆ ಸಿದ್ಧವಾದ ವಸ್ತುಗಳು ಆಮದಾದರೆ, ಭಾರತದಿಂದ ಅದಿರು, ಹತ್ತಿ ಮೊದಲಾದ ಕಚ್ಚಾ ವಸ್ತುಗಳೇ ಹೆಚ್ಚಾಗಿ ರಫ್ತಾಗುತ್ತವೆ. ಭಾರತದ ಮೊಬೈಲ್ ಫೋನ್ ಮಾರುಕಟ್ಟೆಯಲ್ಲಿ ಚೀನಾದ ಪಾಲು ಶೇ 51%. ಭಾರತದ ಪ್ಲಾಸ್ಟಿಕ್ ವಸ್ತುಗಳು, ಆಟಿಕೆಗಳು, ಫ್ಯಾಬ್ರಿಕ್ ಬಟ್ಟೆಗಳ ಮಾರುಕಟ್ಟೆಯಲ್ಲಿ ಚೀನಾದ್ದೇ ಪ್ರಾಬಲ್ಯವಿದೆ. ಮಾರುಕಟ್ಟೆಯನ್ನು ಆಕ್ರಮಿಸಿಕೊಳ್ಳುವುದು ಒಂದಾದರೆ ಕಳಪೆ ಗುಣಮಟ್ಟದ ಅಗ್ಗದ ಚೀನಿ ವಸ್ತುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟ ಪರಿಣಾಮ ಸ್ಥಳೀಯ ಕೈಗಾರಿಕೆಗಳ ಮೇಲೆ ದೊಡ್ಡ ಹೊಡೆತ ಬಿದ್ದಿದೆ. ವಿಶ್ವಪ್ರಸಿದ್ಧ ಚನ್ನಪಟ್ಟಣ ಬೊಂಬೆಗಳಂತೆ ಕಾಣುವ ಚೀನಾ ನಿರ್ಮಿತ ನಕಲಿ ಬೊಂಬೆಗಳು ಮಾರುಕಟ್ಟೆಗೆ ಬಂದ ಕಾರಣ ಚನ್ನಪಟ್ಟಣ ಬೊಂಬೆ ಗುಡಿಕೈಗಾರಿಕೆ ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದು ವರದಿಯಾಗಿತ್ತು. ಸೋಲಾರ್ ಉಪಕರಣ ಮಾರುಕಟ್ಟೆಯಿಂದ ಶಿವಕಾಶಿಯ ಪಟಾಕಿಗಳವರೆಗೆ ಅಗ್ಗ ಆದರೆ ಕಳಪೆ ಗುಣಮಟ್ಟದ ಚೀನಿ ವಸ್ತುಗಳು ವ್ಯವಸ್ಥಿತವಾಗಿ ಭಾರತೀಯ ಕೈಗಾರಿಕೆಯನ್ನು ನಾಶ ಮಾಡುತ್ತಿವೆ.

## ಯಾಕಾಗಬಾರದು ಚೀನಾ ಬಹಿಷ್ಕಾರ?

ಕೆಲವು ತಿಂಗಳುಗಳ ಹಿಂದೆ ದಕ್ಷಿಣ ಕೊರಿಯಾ ದೇಶದಲ್ಲಿ ಅಮೆರಿಕವು ಕ್ಷಿಪಣಿ ನಿರೋಧಕ ವ್ಯವಸ್ಥೆಯನ್ನು ನಿರ್ಮಿಸುವ ವಿಷಯದಲ್ಲಿ ಚೀನಾ ದಕ್ಷಿಣ ಕೊರಿಯಾದೊಂದಿಗೆ ತಗಾದೆ ಮಾಡಿಕೊಂಡಿತು. ಚೀನಾದಲ್ಲಿ ವ್ಯವಹಾರ ಹೊಂದಿರುವ ದ. ಕೊರಿಯಾದ ಪ್ರಸಿದ್ಧ ಸಂಸ್ಥೆ ಲೊಟ್ಟೆಯ (LOTTE) ವಸ್ತುಗಳನ್ನು ಚೀನಾ ನಾಗರಿಕರು ಕೊಳ್ಳುವುದನ್ನು ನಿಲ್ಲಿಸಿದರು. ದಕ್ಷಿಣ ಕೊರಿಯಾ ಕಂಪನಿಗಳ ವಸ್ತುಗಳನ್ನು ಖರೀದಿಸದಂತೆ ಸರ್ಕಾರವೂ ಮನವಿ ಮಾಡಿತು. ಅನೇಕ ಚೀನಿ ಕಂಪನಿಗಳು ನಾವು ಇನ್ನು ದಕ್ಷಿಣ ಕೊರಿಯಾದ ಕಂಪನಿಗಳೊಂದಿಗೆ ವ್ಯವಹಾರ ಮಾಡುವುದಿಲ್ಲ ಎಂದು ಘೋಷಿಸಿದವು. ಅನೇಕ ಆನ್‌ಲೈನ್ ವ್ಯಾಪಾರಿ ಪೋರ್ಟಲ್‌ಗಳು ಹಾಗೂ ಸೂಪರ್ ಮಾರ್ಕೆಟ್‌ಗಳು ದಕ್ಷಿಣ ಕೊರಿಯಾದ ವಸ್ತುಗಳನ್ನು ಮಾರುವುದನ್ನು ನಿಲ್ಲಿಸಿದವು. ಹೀಗೆ ಯಾವುದೇ ದೇಶದೊಡನೆ ಚೀನಾ ವೈಷಮ್ಯಕ್ಕೊಳಗಾದಾಗ ಅಲ್ಲಿನ ಜನ ಆ ದೇಶದಿಂದ ಆಮದಾಗುವ ವಸ್ತುಗಳನ್ನು ಬಹಿಷ್ಕರಿಸಿ ಪ್ರತಿಭಟಿಸುತ್ತಾರೆ. 2005 ಚೀನಾ ಜಪಾನಿನೊಂದಿಗೆ ವೈಷಮ್ಯ ಹೊಂದಿದ್ದಾಗ ಜಪಾನಿನ ಹೊಂಡಾ, ಟೊಯೋಟಾ ಮೊದಲಾದ ಬ್ರಾಂಡಿನ ಉತ್ಪನ್ನಗಳನ್ನು, ಜಪಾನಿ ಇಲೆಕ್ಟ್ರಾನಿಕ್ಸ್ ವಸ್ತುಗಳನ್ನು ಬಹಿಷ್ಕರಿಸಿತ್ತು. 2010ರಲ್ಲಿ ಚೀನಾ ಮೂಲದ ಮಾನವ ಹಕ್ಕು ಹೋರಾಟಗಾರ ಲಿಯು ಕ್ಸಿಯಾಬೊವನ್ನು ನಾರ್ವೆ ನೋಬೆಲ್ ಕಮಿಟಿಯು ನೋಬೆಲ್ ಶಾಂತಿ ಬಹುಮಾನಕ್ಕೆ ಆಯ್ಕೆ ಮಾಡಿದಾಗ ಅದನ್ನು ಪ್ರತಿಭಟಿಸಿದ ಚೀನಾ ನಾರ್ವೇ ದೇಶದ ವಸ್ತುಗಳನ್ನು ಬಹಿಷ್ಕರಿಸಿತು. ಕಳೆದ ವರ್ಷ 2016ರಲ್ಲಿ ಹೇಗ್‌ನ ಅಂತಾರಾಷ್ಟ್ರೀಯ ಆರ್ಬಿಟ್ರೇಶನ್ ನ್ಯಾಯಾಲಯದಲ್ಲಿ ದಕ್ಷಿಣ ಚೀನಾ ಸಾಗರ ಪ್ರಕರಣದಲ್ಲಿ ಚೀನಾ ವಿರುದ್ಧ ನಿರ್ಣಯ ಪ್ರಕಟಿಸಿದಾಗ ಅಮೆರಿಕದ ಮೇಲೆ ಸಿಟ್ಟಿಗೆದ್ದ ಚೀನಾ ಅಮೆರಿಕದ ಹೋಟೆಲ್ ಬ್ರಾಂಡ್‌ಗಳಾದ ಮೆಕ್‌ಡೊನಾಲ್ಡ್ ಮತ್ತು ಕೆಎಫ್‌ಸಿಗಳಿಗೆ ದೇಶ ಬಿಟ್ಟು ಹೊರಡುವಂತೆ ತಾಕೀತು ಮಾಡಿತು. ಈ ಹಿಂದೆ ಗೂಗಲ್ ಫೇಸ್‌ಬುಕ್‌ಗಳೂ ಚೀನಾದ ಕೆಂಗಣ್ಣಿಗೆ ಗುರಿಯಾಗಿದ್ದವು. 2008ರಲ್ಲಿ ಒಲಂಪಿಕ್ ಟಾರ್ಚ ಫ್ರಾನ್ಸಿನ ಪ್ಯಾರಿಸ್‌ಗೆ ಹೋಗಿದ್ದ ಸಮಯದಲ್ಲಿ ಟಿಬೇಟ್ ಸ್ವಾತಂತ್ರ್ಯ ಹೋರಾಟಗಾರರು ಪ್ರತಿಭಟಿಸಿದ್ದಕ್ಕೆ ಸಿಟ್ಟಾದ ಚೀನಿಯರು ದೇಶದಲ್ಲಿರುವ ಫ್ರಾನ್ಸ್ ಮೂಲದ ಸೂಪರ್ ಮಾರ್ಕೆಟ್ ಮಳಿಗೆಗಳನ್ನು ಬಹಿಷ್ಕರಿಸಿದರು.

**ಚೀನಿಯರು ವಿರೋಧಿ ದೇಶದ ಉತ್ಪನ್ನಗಳನ್ನು ಬಹಿಷ್ಕರಿಸಬಹುದಾದರೆ, ನಮ್ಮಲ್ಲೂ ಯಾಕಾಗಬಾರದು ಚೀನಾ ಬಹಿಷ್ಕಾರ?**

ಚೀನಾ ತನ್ನನ್ನು ಶಕ್ತಿಶಾಲಿ ಎಂದು ಭಾವಿಸುತ್ತದೆ. ಆದ್ದರಿಂದ ಅದು ವಿಶ್ವದ ಯಾವುದೇ ನಿಯಮ ಒಪ್ಪಂದಗಳನ್ನು ಮಾನ್ಯ ಮಾಡಬೇಕೆಂದು ಭಾವಿಸುವುದಿಲ್ಲ. ತಾನು ಹೇಳಿದಂತೆ ಐತಿಹಾಸಿಕವಾಗಿ ಯಾವ ಭೂಭಾಗ ಚೀನಾಕ್ಕೆ ಸೇರಿದೆ ಅಂದರೆ, ವಿಶ್ವವೂ ಅದನ್ನು ಒಪ್ಪಿ ಮಾನ್ಯ ಮಾಡಬೇಕು ಎಂದು ಅದು ಬಯಸುತ್ತದೆ. ಇದು ಟಿಬೇಟ್ ಆಗಿರಬಹುದು, ಆಕ್ರಮಿಕ ಜಮ್ಮುಕಾಶ್ಮೀರದ ಭೂಭಾಗವಿರಬಹುದು, ಅರುಣಾಚಲವಿರಬಹುದು ಅಥವಾ ದಕ್ಷಿಣ ಚೀನಾ ಸಾಗರ ಪ್ರದೇಶವೂ ಆಗಿರಬಹುದು. ಈಗ ಭೂತಾನ್ ಗಡಿಯ ಡೋಕಲಮ್ ಪ್ರದೇಶದಲ್ಲಿ ರಸ್ತೆ ನಿರ್ಮಾಣ ಮಾಡುತ್ತಿರುವ ವಿಷಯವನ್ನೇ ತೆಗೆದುಕೊಂಡರೆ 1988 ಮತ್ತು 1998ರಲ್ಲಿ ಚೀನಾ ಭೂತಾನಿನೊಂದಿಗೆ ಈ ವಿಷಯದಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಆದರೆ ಒಪ್ಪಂದವನ್ನು ಧಿಕ್ಕರಿಸಿ ಡೋಕಲಮ್ ತನ್ನದು ಎಂದು ಈಗ ಹೊಸ ನಕಾಶೆಯನ್ನು ಬಿಡುಗಡೆ ಮಾಡಿ ಒತ್ತುವರಿಗೆ ಮುಂದಾಗಿದೆ.

ಪ್ರಸ್ತುತ ಸನ್ನಿವೇಶದಲ್ಲಿ ಚೀನಾ ರಣತಂತ್ರವೇನು ಎನ್ನುವುದು ಸ್ಪಷ್ಟವಾಗಿದೆ. ಭಾರತ ಮತ್ತು ಭೂತಾನ್ ನಡುವೆ ಒಂದು ಹತ್ತಿರದ ಸಂಬಂಧವಿದೆ. ಹಾಗಾಗಿ ಡೋಕಲಮ್ ಒಪ್ಪಂದವನ್ನು ಧಿಕ್ಕರಿಸಿ ಭೂತಾನಿನ ಗಡಿಯಲ್ಲಿ ರಸ್ತೆ ನಿರ್ಮಾಣ ಮಾಡಿ, ಜೊತೆಗೆ ಭಾರತದ ಮೇಲೆ ಒತ್ತಡ ಹೇರುತ್ತಿದೆ. ಭಾರತ ಒತ್ತಡಕ್ಕೆ ಸಿಕ್ಕಿದರೆ ದಕ್ಷಿಣ ಚೀನಾ ಸಮುದ್ರಕ್ಕೆ ಹೊಂದಿಕೊಂಡಿರುವ ವಿಯೆಟ್ನಾಮ್, ಫಿಲಿಫೈನ್ಸ್ ಅಲ್ಲದೇ ಉಳಿದ ಭಾರತವನ್ನು ಬೆಂಬಲಿಸುವ ದೇಶಗಳ ದನಿಯೂ ತಗ್ಗಲಿದೆ ಎಂದು ಚೀನಾ ಯೋಚಿಸುತ್ತದೆ. ಆ ದೇಶಗಳ ಮೇಲೂ ಒತ್ತಡ

"ಚೀನಾ ಸರ್ಕಾರ ಭಾರತದ ವಿರುದ್ಧ ಸೇನಾ ಶಕ್ತಿಯನ್ನು ಬಳಸುತ್ತಿರುವ ಈ ಸಮಯದಲ್ಲಿ ದೇಶದ ನಾಗರಿಕರಾದ ನಾವು ಚೀನಾದ ಆರ್ಥಿಕ ಲಾಭಕ್ಕೆ ಸಹಕಾರ ನೀಡಬಾರದು. ಮುಂಬಯಿಯ ಶಾಲಾ ಮಕ್ಕಳೇ ಚೀನಾಕ್ಕೆ ಒಂದು ಪಾಠ ಕಲಿಸಬಹುದು ಎನ್ನುತ್ತಾರೆ" ಮುಂಬೈ ಶಾಲಾ ಪ್ರಿನ್ಸಿಪಾಲರ ಸಂಘದ ಕಾರ್ಯದರ್ಶಿ ಪ್ರಶಾಂತ್ ರೆಡಿಜ್. ಸಂಘದಲ್ಲಿ 1900 ಸದಸ್ಯರಿದ್ದು ತಮ್ಮ ಶಾಲೆಗಳ ಮಕ್ಕಳು, ಪಾಲಕರು ಹಾಗೂ ಮುಖ್ಯಸ್ಥರಿಗೆ ಚೀನಾದಿಂದ ಆಮದಾಗುವ ಸ್ಟೇಶ್‌ನರಿ ವಸ್ತುಗಳನ್ನು ಬಳಸಿಬೇಡಿ ಎಂದು ಮನವಿ ಮಾಡಲು ನಿರ್ಧರಿಸಿದೆ. ಆ ಮೂಲಕ ಮಕ್ಕಳಲ್ಲೂ ದೇಶಪ್ರೇಮ ಬೆಳೆಸುವುದರ ಜೊತೆಗೆ ಪಾಲಕರು ಸ್ಥಳೀಯವಾಗಿ ನಮ್ಮ ದೇಶದಲ್ಲೇ ತಯಾರಾಗುವ ವಸ್ತುಗಳನ್ನು ಬಳಸತೊಡಗಿದರೆ ಚೀನಾದ ಭಾರತದ ಅರ್ಥವ್ಯವಸ್ಥೆಗೆ ಲಾಭವಾಗುವುದು ಎಂದು ಸಂಘ ಹೇಳುತ್ತದೆ. ಇನ್ನೂ ಅನೇಕ ಸಂಘ ಸಂಸ್ಥೆಗಳೂ ಅಲ್ಲದೇ ಮಾಧ್ಯಮ ಸಂಸ್ಥೆಗಳೂ ಚೀನಾ ವಸ್ತು ಬಹಿಷ್ಕಾರ ಚಳುವಳಿಗೆ ಕರೆ ಕೊಟ್ಟಿವೆ. ಪ್ರತಿಭಟನೆ ಪ್ರದರ್ಶನಗಳು, ಸಾಮಾಜಿಕ ಜಾಲತಾಣಗಳ ಪ್ರಚಾರ ಬಿರುಸಾಗಿ ನಡೆದಿದೆ.



**ಹೆಸರು :** ಸಾಹಿವಾಲ್

**ಮೂಲ :** ಪಂಜಾಬ್ ರಾಜ್ಯದ ಸಾಹಿವಾಲ್ ಪ್ರಾಂತ್ಯ

**ರೂಪ :** ಶರೀರ ಗಾತ್ರದಲ್ಲಿ ದೊಡ್ಡವು. ಕಂದು, ಕೆಂಪು ಬಣ್ಣಗಳನ್ನು ಹೊಂದಿರುತ್ತವೆ. ಕೆಲವು ಹಸುಗಳ ಮೈಮೇಲೆ ಬಿಳಿಯ ಮಚ್ಚೆಗಳು ಇರುತ್ತವೆ. ಗಿಡ್ಡ ಕೋಡುಗಳನ್ನು ಹೊಂದಿರುತ್ತವೆ. ಗೂಳಿಗಳು ಕಡುಕಂದು ಬಣ್ಣ ಹೊಂದಿರುತ್ತವೆ.

**ವಿಶೇಷತೆ :** ಕಡು ತಾಪಮಾನಗಳಲ್ಲಿ ಸಲೀಸಾಗಿ ಹೊಂದಿಕೊಳುತ್ತವೆ, ಒಳ್ಳೆಯ ಹಾಲಿನ ಪ್ರಮಾಣವೂ ಇದೆ. ಮಧ್ಯ ಅಮೆರಿಕದ ಜಮೈಕಾ, ಗಯಾನಾ ಮೊದಲಾದ ಕೆರಿಬಿಯನ್ ದೇಶಗಳು ಈ ಹಸುಗಳನ್ನು ಆಮದು ಮಾಡಿಕೊಳ್ಳುತ್ತವೆ. ಆಸ್ಟ್ರೇಲಿಯ ಮತ್ತು ಆಫ್ರಿಕದ ಹವಾಮಾನಕ್ಕೂ ಈ ತಳಿಯ ಆಕಳು–ಗೂಳಿಗಳು ಚೆನ್ನಾಗಿ ಹೊಂದಿಕೊಂಡಿವೆ.

**ಹಾಲಿನ ಪ್ರಮಾಣ :** ಒಂದು ಕರಾವಿನಲ್ಲಿ 1600 ರಿಂದ 2750 ಲೀಟರ್‌ವರೆಗೆ

ಹಾಕಿದರೆ ಭಾರತವೂ ಅವುಗಳಿಗೆ ಸಹಾಯ ಮಾಡುವ ಮೊದಲು ವಿಚಾರ ಮಾಡುತ್ತದೆ ಎಂದು ಚೀನಾ ಚಿಂತಿಸುತ್ತದೆ. ಹಾಗೆಯೇ ಸಿಕ್ಕಿಂ ಎಂತಹ ಪ್ರದೇಶ ಎಂದರೆ ಚೀನಾ ಅದರ ಗಡಿಯವರೆಗೆ ರಸ್ತೆ ನಿರ್ಮಿಸಿದರೆ ಭಾರತದೊಂದಿಗೆ ಯುದ್ಧದ ಸನ್ನಿವೇಶದಲ್ಲಿ ಸಿಲಿಗುರಿ ಕಾರಿಡಾರ್ ಅಥವಾ ಚಿಕನ್ ನೆಕ್ ಮೇಲೆ ಒತ್ತಡ ಹಾಕಿ ಭಾರತವನ್ನು ಬಗ್ಗಿಸಬಹುದು ಎಂದು ಚೀನಾ ಯೋಚಿಸುತ್ತದೆ. ಈ ಕಿರಿದಾದ ಪ್ರದೇಶ ಭಾರತ ಮುಖ್ಯಭಾಗವನ್ನು ಪೂರ್ವೋತ್ತರ ಭೂಭಾಗದೊಂದಿಗೆ ಬೆಸೆಯುತ್ತದೆ. ಇನ್ನೊಂದು, ಭಾರತ ಅಮೆರಿಕ ಮತ್ತು ಜಪಾನ್ ದೇಶಗಳು ಪಾಲ್ಗೊಳ್ಳುವ ಸಮರಾಭ್ಯಾಸ ಆಪರೇಶನ್ ಮಲಬಾರ್‌ನಲ್ಲಿ ಪಾಲ್ಗೊಳ್ಳದಂತೆ ಭಾರತದ ಮೇಲೆ ಒತ್ತಡ ಹೇರುವುದೂ ಚೀನಾದ ತಂತ್ರದ ಭಾಗವಾಗಿದೆ.


ಆದರೆ ಪ್ರಸ್ತುತ ಭಾರತ ಸರ್ಕಾರ ಒಂದಿಷ್ಟು ಕಠಿಣ ಹೆಜ್ಜೆಗಳನ್ನು ಇರಿಸಿದೆ. ಭಾರತ ಸೇನೆ ಸಿಕ್ಕಿಂ ಗಡಿಯಿಂದ ವಾಪಸ್ ಹೋಗದಿದ್ದರೆ 1962ರ ಯುದ್ಧದಲ್ಲಾದ ನಷ್ಟಕ್ಕೂ ಅಧಿಕ ಹಾನಿಯನ್ನು ಎದುರಿಸಿಬೇಕಾಗಬಹುದು ಎಂದು ಹೆದರಿಸಲು ಪ್ರಯತ್ನಿಸಿದ ಚೀನಾಕ್ಕೆ ತಕ್ಕ ಉತ್ತರ ನೀಡಿದ ಭಾರತದ ರಕ್ಷಣಾ ಸಚಿವ, 1962ರ ಭಾರತ ಮತ್ತು 2017ರ ಭಾರತದಲ್ಲಿ ಬಹಳ ಅಂತರವಿದೆ ಎಂದು ಖಡಕ್ಕಾಗಿ ಹೇಳಿದರು. ಹಾಗೆಯೇ ಚೀನಾ ಒತ್ತಡಕ್ಕೆ ಮಣಿಯದ ಭಾರತ ಅಮೆರಿಕದೊಂದಿಗೆ ಸಮರಾಭ್ಯಾಸದಲ್ಲೂ ತೊಡಗಿದೆ. ಹಿಂದೆ ಅನೇಕ ಬಾರಿ ಗಡಿಯಲ್ಲಿ ಚೀನಾ ಸೈನಿಕರು ಒಳನುಸುಳಲು ಪ್ರಯತ್ನಿಸಿದಾಗ ಭಾರತೀಯ ಸೈನಿಕರು ಅವರನ್ನು ಹಿಮ್ಮೆಟ್ಟಿಸಿದ್ದಾರೆ. ಇದನ್ನೂ ಚೀನಾಕ್ಕೆ ನೆನಪು ಮಾಡಿಕೊಡಬೇಕಿದೆ. ಭಾರತಕ್ಕೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಖಾಯಂ ಸದಸ್ಯತ್ವ, ಎನ್‌ಎಸ್‌ಜಿ ಸದಸ್ಯತ್ವ ಸಿಗುವಲ್ಲಿ ಅಡ್ಡಗಾಲು, ಪಾಕಿಸ್ತಾನಿ ಉಗ್ರ ಸಂಘಟನೆಗಳಿಗೆ ಪರೋಕ್ಷ ಬೆಂಬಲ, ಪಾಕ್ ಆಕ್ರಮಿತ ಜಮ್ಮುಕಾಶ್ಮೀರದ ಗಿಲ್ಗಿಟ್ ಪ್ರದೇಶದಲ್ಲಿ ಕಾರಿಡಾರ್ ಯೋಜನೆ, ಆಗಾಗ ಗಡಿ ಉಪಟಳ ಹೀಗೆ ಸದಾ ಭಾರತದ ವಿರುದ್ಧ ಕತ್ತಿ ಮಸೆಯುವ ಚೀನಾದೊಂದಿಗೆ ವ್ಯವಹರಿಸಲು ಕಠಿಣ ನೀತಿಯನ್ನು ಅನುಸರಿಸಬೇಕಿದೆ.

## ನಮ್ಮ ಕೈಯಲ್ಲಿರಲಿ ಭಾರತೀಯ ರಕ್ಷೆ

ಭಾರತೀಯ ಮಾರುಕಟ್ಟೆಯಲ್ಲಿರುವ ರಕ್ಷಾಬಂಧನಗಳಲ್ಲಿ ಬಹುಪಾಲು ಚೀನಾದಿಂದ ಆಮದಾಗಿರುತ್ತಿವೆ ಎನ್ನಲಾಗಿದೆ. ಭಾರತದೆಲ್ಲೆಡೆ ಈ ರಕ್ಷೆಯನ್ನು ಸೌಂದರ್ಯದ ವಸ್ತುವಾಗಿ ನೋಡದೇ ಸೋದರತೆಯ ಸಂಕೇತವಾಗಿ, ಸ್ವದೇಶ ರಕ್ಷಣೆಯ ಸಂಕಲ್ಪದೊಂದಿಗೆ ಧರಿಸಲಾಗುತ್ತದೆ. ಈ ಬಾರಿಯ ರಕ್ಷಾಬಂಧನದಲ್ಲಿ ಆಡಂಬರಕ್ಕೆ ಜೋತು ಬೀಳದೇ ರೇಷ್ಮೆಯಿಂದ ತಯಾರಿಸಿದ ಗ್ರಾಮೀಣ ಉತ್ಪನ್ನಗಳನ್ನೇ ಬಳಸುವ ಸಂಕಲ್ಪ ಕೈಗೊಳ್ಳೋಣ.

# ದೀನ್‌ದಯಾಳ್‌ಜೀ ಸ್ಮರಣೆ

ಕಾನ್ಪುರದ ಸನಾತನ ಧರ್ಮ ಕಾಲೇಜಿನಿಂದ ಪದವಿ ಶಿಕ್ಷಣ ಮುಗಿಸಿದ ಪಂಡಿತ ದೀನದಯಾಳ್ ಉಪಾಧ್ಯಾಯ, ನಂತರ ಪ್ರಾಂತೀಯ ಸೇವೆಗಳ ಪರೀಕ್ಷೆಯಲ್ಲಿ ಆಯ್ಕೆಯಾದರೂ ಕೂಡ ನೌಕರಿ ಸೇರಬಯಸದೇ ಇನ್ನೂ ಓದುವ ಆಸಕ್ತಿಯಿಂದ ಪ್ರಯಾಗಕ್ಕೆ ತೆರಳಿದರು. ಓದಿನ ಬಗ್ಗೆ ಅವರಿಗಿದ್ದ ವಿಶೇಷವಾದ ಒಲವೇ ಇದಕ್ಕೆ ಕಾರಣ. ವಿದ್ಯಾರ್ಥಿ ಜೀವನ ಮುಗಿಯುವವರೆಗೂ ಅಕ್ಷರಷಃ ಅಲೆಮಾರಿ ಜೀವನ ಅವರದಾಗಿತ್ತು. ಇಲ್ಲಿಯವರೆಗೆ ಅವರು ರಾಜಸ್ಥಾನ ಹಾಗೂ ಉತ್ತರಪ್ರದೇಶದ ಸರಿಸುಮಾರು 11 ಸ್ಥಳಗಳಲ್ಲಿ ವಾಸಮಾಡಿದ್ದರು. ಅವರಿಗಾದ ಈ ಅಲೆಮಾರಿ ಅನುಭವಗಳೇ ಮುಂದಿನ ಸಾರ್ವಜನಿಕ ಜೀವನದಲ್ಲಿ ಸ್ಥಳದಿಂದ ಸ್ಥಳಕ್ಕೆ ಸಂಚರಿಸಲು, ಹೊಸ ಜನರ ನಡುವೆ ಬೆರೆಯಲು, ಸಮಾಜದ ದೀನದಲಿತರ ನಡುವೆ ಕಲೆತು ಅವರ ಕಷ್ಟಗಳು ಮತ್ತು ಸಮಸ್ಯೆಗಳನ್ನು ಅರಿಯಲು ಶಕ್ತರನ್ನಾಗಿ ಮಾಡಿದವು.




ಪ್ರಾಮಾಣಿಕತೆಯ ಆದರ್ಶ ಬಾಲ್ಯದಿಂದಲೇ ದೀನದಯಾಳರಲ್ಲಿ ಮೈಗೂಡಿತ್ತು. ಒಂದು ಬಾರಿ ಅಂಗಡಿಯೊಂದರಿಂದ ಸಾಮಾನನ್ನು ಖರೀದಿಸಿ ಇನ್ನೇನು ಮನೆಗೆ ತಲುಪಬೇಕು ಅನ್ನುವಾಗ, ಅಂಗಡಿಯವನಿಗೆ ಹಣಕೊಡುವಾದ ತಮ್ಮ ಬಳಿಯಿದ್ದ ಸವಕಲು ನಾಣ್ಯವೊಂದನ್ನು ನೀಡಿದೆನೇ? ಎಂದು ಸಂಶಯ ಬಂತು, ಜೇಬನ್ನು ಪರೀಕ್ಷಿಸಿದಾಗ ಖಾತ್ರಿ ಆಯಿತು. ಇದರಿಂದ ವಿಚಲಿತರಾದ ದೀನ್‌ದಯಾಳರು ಅಪರಾಧಿ ಪ್ರಜ್ಞೆಯಿಂದ ಮತ್ತೆ ಸೀದಾ ಅಂಗಡಿಗೆ ಓಡಿದರು. ಅಂಗಡಿಯವನ ಹಣದ ಡಬ್ಬಿಯಿಂದ ಸವಕಲು ನಾಣ್ಯವನ್ನು ಹುಡುಕಿ ತೆಗೆದು, ಅದಕ್ಕೆ ಪ್ರತಿಯಾಗಿ ಒಳ್ಳೆಯ ನಾಣ್ಯವನ್ನು ಬದಲಿ ಕೊಟ್ಟು ತಿರುಗಿ ಮನೆಗೆ ಬಂದರು. ಇದು ಸಾರ್ವಜನಿಕ ಜೀವನದಲ್ಲಿ ನಿಷ್ಠುರ ಪ್ರಾಮಾಣಿಕತೆಯನ್ನು ಅನುಸರಿಸಿದ ದೀನ್‌ಯಾಳರ ಬದುಕಿನ ಒಂದು ಚಿಕ್ಕ ನಿದರ್ಶನ ಅಷ್ಟೆ.

ಕಾನ್ಪುರದ ಕಾಲೇಜಿನ ದಿನಗಳಲ್ಲಿ ದೀನದಯಾಳ್ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಪರ್ಕಕ್ಕೆ ಬಂದರು. ನಂತರ ಪ್ರಯಾಗದಲ್ಲಿ ತಂತ್ರಜ್ಞಾನ ಪದವಿ ಪಡೆದ ನಂತರ 1941ರಲ್ಲಿ ಸಂಘದ ಶಿಕ್ಷಣ ಶಿಬಿರದಲ್ಲಿ ಭಾಗವಹಿಸುವಾಗ ಅವರ ಅಸಾಧಾರಣ ಭೌದ್ಧಿಕ ಶಕ್ತಿ ಮತ್ತು ವಿಚಾರ ಪ್ರಖರತೆ, ಶಿಬಿರದ ವಿವಿಧ ಚಟುವಟಿಕೆಗಳಲ್ಲಿನ ಪ್ರಶ್ನೆಗಳಿಗೆ ಅವರು ನೀಡುತ್ತಿದ್ದ ಪದ್ಯರೂಪದ ವಿವರಣೆ ಮತ್ತು ಅದರಲ್ಲಿ ಅಡಗಿರುತ್ತಿದ್ದ ಚಿಂತನೆಗಳಿಂದ ಸಂಘದ ಹಿರಿಯರೂ ಕೂಡ ಪ್ರಭಾವಿತರಾದರು. ಶಿಕ್ಷಣ ಮುಗಿದ ನಂತರ ತಮ್ಮ ಪೂರ್ಣ ಸಮಯವನ್ನು ಸಮಾಜಕಾರ್ಯಕ್ಕೆ ನೀಡಿದ ದೀನದಯಾಳ್ ಆರೆಸ್ಸೆಸ್‌ನ ಪೂರ್ಣಕಾಲೀನ ಕಾರ್ಯಕರ್ತ(ಪ್ರಚಾರಕ)ರಾಗಿ ಹೊರಟರು. ನಂತರ ಜೀವನಪರ್ಯಂತ ಬ್ರಹ್ಮಚಾರಿಯಾಗಿ ಉಳಿದು ಸಮಾಜಸೇವೆಯಲ್ಲಿ ಸಂಪೂರ್ಣ ತೊಡಗಿಸಿಕೊಳ್ಳಲು ಅವರಿಗೆ ಸಂಘದ ವಿಚಾರಧಾರೆ ಪ್ರೇರಕವಾಯಿತು. ಮುಂದೆ ಭಾರತೀಯ ಜನಸಂಘ ಹೆಸರಿನ ರಾಷ್ಟ್ರವಾದಿ ರಾಜಕೀಯ ಪಕ್ಷ ಉಗಮವಾದಾಗ ಮೊದಲ ಕಾರ್ಯದರ್ಶಿಯಾಗಿ ಅದಕ್ಕೆ ಸಂಘಟನೆ ಹಾಗೂ ಸೈದ್ಧಾಂತಿಕ ಬುನಾದಿಯನ್ನು ಸ್ಥಾಪಿಸಲೂ ಕೂಡ ಅವರಿಗೆ ಸಂಘದ ಸರಳ ಪ್ರಚಾರಕ ಜೀವನ ಹಾಗೂ ಪ್ರಖರ ರಾಷ್ಟ್ರೀಯ ಚಿಂತನೆಗಳು ಭದ್ರ ಅಡಿಪಾಯವನ್ನು ಒದಗಿಸಿದವು.

## ವಿಕ್ರಮ್ ಸಾರಾಭಾಯಿ
### (12 ಆಗಸ್ಟ್ 1919 – 30 ಡಿಸೆಂಬರ್ 1971)



12 ಆಗಸ್ಟ್ 1919ರಂದು ಗುಜರಾತಿನ ಅಹ್ಮದಾಬಾದ್‌ನ ಪ್ರತಿಷ್ಠಿತ ಸಾರಾಭಾಯಿ ಕುಟುಂಬದಲ್ಲಿ ಜನಿಸಿದ ವಿಕ್ರಮ್ ಸಾರಾಭಾಯಿ ಮುಂದೆ ಆಧುನಿಕ ಭಾರತದ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಅಚ್ಚಳಿಯದ ಛಾಪು ಮೂಡಿಸಿದರು. ತಂದೆ ಅಂಬಾಲಾಲ್ ಸಾರಾಭಾಯ್. ತಾಯಿ ಸರಳಾದೇವಿ. ಚಿಕ್ಕಂದಿನಿಂದಲೇ ಬುದ್ಧಿವಂತನಾಗಿದ್ದ ಬಾಲಕ ವಿಕ್ರಮ್ ಸಾಹಸಪ್ರಿಯ ಕೂಡಾ. ಸ್ವಾತಂತ್ರ ಚಳುವಳಿಗೆ ಕಟ್ಟಾ ಬೆಂಬಲಿಗರಾಗಿದ್ದ ಇವರ ಮನೆಗೆ ಮಹಾತ್ಮ ಗಾಂಧೀಜಿ, ವಲ್ಲಭಭಾಯಿ ಪಟೇಲ್, ರವೀಂದ್ರರಂತಹ ಮಹನೀಯರ ಭೇಟಿ ನಿತ್ಯದ ಘಟನೆಗಳಾಗಿದ್ದವು. ಕೇಂಬ್ರಿಡ್ಜಿನಲ್ಲಿ ಕಾಲೇಜು ಶಿಕ್ಷಣವನ್ನು ಪಡೆದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಕೆಂದ್ರದಲ್ಲಿ ಸಿ.ವಿ. ರಾಮನ್ ಅವರ ಬಳಿ ಸಂಶೋಧನಾ ವಿದ್ಯಾರ್ಥಿಯಾಗಿ ಸೇರಿದ ವಿಕ್ರಮ್ ಸಾರಾಭಾಯಿ, ಕಾಸ್ಮಿಕ್ ಕಿರಣಗಳ ಬಗೆಗೆ ಅಧ್ಯಯನ ಕೈಗೊಂಡರು. ನಂತರದ ದಿನಗಳಲ್ಲಿ 'ಫಿಸಿಕಲ್ ರಿಸರ್ಚ್ ಲ್ಯಾಬೊರೇಟರಿ' ಸೇರಿದಂತೆ ಅನೇಕ ವಿಜ್ಞಾನ ಸಂಸ್ಥೆಗಳನ್ನು ಸ್ಥಾಪಿಸಿ ಭಾರತದಾದ್ಯಂತ ವಿಜ್ಞಾನ ಕಾರ್ಯಕ್ಕೆ ಅಡಿಪಾಯವಿಟ್ಟರು.

ಸಾರಾಭಾಯಿ ಅವರು ಹೋಮಿ ಜಹಾಂಗೀರ್ ಬಾಬಾರ ಅವರ ಬೆಂಬಲದೊಂದಿಗೆ, ತುಂಭಾ ಹಾಗೂ ಶ್ರೀಹರಿಕೋಟಾಗಳಲ್ಲಿ ಮೊದಲ ಬಾರಿಗೆ ರಾಕೆಟ್‌ಗಳ ಉಡಾವಣಾ ಕೇಂದ್ರವನ್ನು ನಿರ್ಮಿಸಿದುದು ದೇಶದ ಮಟ್ಟಿಗೆ ಒಂದು ಹೊಸ ಮೈಲುಗಲ್ಲು. ಇದು ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಇಂದು ಮಾಡುತ್ತಿರುವ ಸಾಧನೆಗಳಿಗೆ ಇವರು ಹಾಕಿದ ಭದ್ರ ಬುನಾದಿಯಾಗಿದೆ. ಸಾರಾಭಾಯಿಯವರ ಮತ್ತೊಂದು ಬಹುದೊಡ್ಡ ಕೊಡುಗೆಯೆಂದರೆ, ಸಾಂಸ್ಥಿಕ ನಿರ್ವಹಣೆಯ ವಿಷಯದಲ್ಲಿ ಹೆಚ್ಚಿನ ಶಿಕ್ಷಣ ನೀಡಲು ಅನುವಾಗುವಂತೆ 'ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್' ತೆರೆದದ್ದು. ಈ ಸಂಸ್ಥೆ ಈಗ ಜಗದ್ವಿಖ್ಯಾತವಾಗಿದೆ.

"ಅಂತರಿಕ್ಷ ವಿಜ್ಞಾನವೆಂಬುದು ನಮಗೆ ಅಭಿವೃದ್ಧಿಶೀಲ ರಾಷ್ಟ್ರಗಳ ಜೊತೆ ನಡೆಸುವ ಶೋಕಿಯ ಪೈಪೋಟಿಯಲ್ಲ, ಜನರ ಜೀವನದಲ್ಲಿ ಕಾಣಬರುವ ನಮ್ಮದೇ ಆದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ವಿಜ್ಞಾನವನ್ನು ಬಳಸುವುದರಲ್ಲಿ ವಿಶ್ವದಲ್ಲಿ ನಾವು ಯಾರೊಬ್ಬರಿಗೂ ಕಡಿಮೆಯಲ್ಲ ಎಂಬ ಆತ್ಮ ವಿಶ್ವಾಸ ನಮ್ಮಲ್ಲಿದೆ. ಇದು ನಮ್ಮ ಎಲ್ಲಾ ವೈಜ್ಞಾನಿಕ ಕಾಯಕಗಳ ಮೂಲದೃಷ್ಟಿ" ಇದು ವಿಕ್ರಂ ಸಾರಾಭಾಯಿ ಅವರ ಸ್ಪಷ್ಟ ನಿಲುವಾಗಿತ್ತು.

ತಮ್ಮ ಇಡೀ ಜೀವನವನ್ನೂ, ಜೊತೆಗೆ ಜೀವಮಾನದ ಹಣ, ಆಸ್ತಿ ಎಲ್ಲವನ್ನೂ ದೇಶದ ವಿಜ್ಞಾನದ ಬೆಳವಣಿಗೆಗಾಗಿ ಮೀಸಲಿರಿಸಿದ ವಿಕ್ರಂ ಸಾರಾಭಾಯಿ ಸಾರ್ಥಕ ಜೀವನ ನಡೆಸಿ ಡಿಸೆಂಬರ್ 30, 1971ರಲ್ಲಿ ನಿಧನರಾದರು.

ಸಂಪಾದಕೀಯ ಸಹಕಾರ ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಶ್ರೀನಿವಾಸ ಹೆಗಡೆ, ಪ್ರತಾಪ ಕೊಡಂಚ, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲಕುಮಾರ್, ಸತ್ಯಾನಾರಾಯಣ ಶಾನಭಾಗ್



ಇಪ್ಪತ್ತು ವರ್ಷಗಳ ಕಾಲ ಕಾದ ಬಳಿಕ ಇದೀಗ ಭಾರತೀಯ ಸೈನಿಕರಿಗೆ ಗುಂಡುನಿರೋಧಕ ಹೆಲ್ಮೆಟ್‌ಗಳು ಸಿಗಲಿವೆ. ಮೂರು ವರ್ಷಗಳ ಅವಧಿಯಲ್ಲಿ 1.58 ಲಕ್ಷ ಹೆಲ್ಮೆಟ್‌ಗಳು ಬರಲಿದ್ದು ಮೊದಲ ಹಂತದಲ್ಲಿ 7,500 ಹೆಲ್ಮೆಟ್‌ಗಳು ಕಳೆದ ವಾರ ಬಂದಿವೆ. ಇದುವರೆಗೆ ಉಪಯೋಗಿಸುತ್ತಿದ್ದ ಶಿರಸ್ತ್ರಾಣಗಳು ಸಂಪೂರ್ಣ ಗುಂಡುನಿರೋಧಕವಾಗಿರಲಿಲ್ಲ ಮತ್ತು 2.5 ಕೆಜಿ ತೂಕ ಹೊಂದಿದ್ದವು. ಇನ್ನು ಮುಂದೆ 1.2 ಕೆಜಿ ತೂಕದ, ಸಂಪೂರ್ಣ ಬುಲೆಟ್‌ಪ್ರೂಫ್ ಗುಣ ಹೊಂದಿರುವ ಮತ್ತು ಪ್ರಪಂಚದ ಹೆಚ್ಚಿನ ಸೈನ್ಯಗಳು ಉಪಯೋಗಿಸುತ್ತಿರುವ ಹೊಸ ಮಾದರಿಯ ಹೆಲ್ಮೆಟ್‌ಗಳು ನಮ್ಮ ಸೈನಿಕರಿಗೂ ಸಿಗಲಿವೆ.

**ಪಂಚಗವ್ಯದ ಔಷಧೀಯ ಲಾಭಗಳ ಕುರಿತು ವೈಜ್ಞಾನಿಕ ಅಧ್ಯಯನ ನಡೆಸಲು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯವು 19 ಜನರ ಒಂದು ಸಮಿತಿಯನ್ನು ರಚಿಸಿದೆ. ಈ ಸಮಿತಿಯು ವಿವಿಧ ಇಲಾಖೆಗಳ ಕಾರ್ಯದರ್ಶಿಗಳು, ಐಐಟಿ ದೆಹಲಿಯ ತಜ್ಞರು, ಗೋವಿಜ್ಞಾನ ಅನುಸಂಧಾನ ಕೇಂದ್ರ ಮತ್ತು ವಿಜ್ಞಾನ ಭಾರತಿಯ ಕೆಲವು ಸದಸ್ಯರನ್ನು ಒಳಗೊಂಡಿರಲಿದೆ ಎಂದು ವರದಿಯಾಗಿದೆ.**



ಮುಂಬಯಿಯ ಗೋರೆಗಾಂವ್(ಪೂರ್ವ)ದಲ್ಲಿ ನೆಲೆಸಿರುವ ಸಂದೀಪ್ ಅತಲ್ಯೆ, ಪತ್ನಿ ವರ್ದಾಯಿನಿ, ಮಗ ಮಲ್ಹರ್ ಮತ್ತು ತಾಯಿ ಆರತಿ ಅವರನ್ನೊಳಗೊಂಡ ಕುಟುಂಬ ಕಳೆದ 17 ವರ್ಷದಿಂದ ಪ್ರತಿವರ್ಷ ಮಳೆಗಾಲದಲ್ಲಿ ಆರೆ ಮಿಲ್ಕ್ ಕಾಲೋನಿಯಲ್ಲಿ ಗಿಡಗಳನ್ನು ನೆಡುತ್ತಾ ಬಂದಿದೆ. ಪರಿಸರ ಪ್ರೇಮಿಯಾಗಿದ್ದ ಮೃತರಾಗಿರುವ ತಂದೆಯ ನೆನಪಿನಲ್ಲಿ ಅವರು ಆರಂಭಿಸಿದ ಕಾಯಕವನ್ನು ಕುಟುಂಬವೇ ಮುಂದುವರೆಸುತ್ತಿದೆ. 2000ನೇ ಇಸವಿಯಲ್ಲಿ ಆರಂಭವಾದ ಗಿಡ ನೆಡುವ ಕುಟುಂಬ ಕಾಯಕದ ಅಡಿಯಲ್ಲಿ ಇದುವರೆಗೆ ನೆಟ್ಟು ಸಲಹಿದ ಒಟ್ಟೂ ಗಿಡಗಳ ಸಂಖ್ಯೆ 5,500. ಕಳೆದ ವರ್ಷದಿಂದ ಇವರ ಕುಟುಂಬ ಆರೆ ಡೈರಿ ಸಮೀಪ ಚಿಟ್ಟೆ ಉದ್ಯಾನವನವನ್ನು ಸ್ಥಾಪನೆ ಮಾಡಿದ್ದು, ಈಗಾಗಲೇ ಅಲ್ಲಿ 15–20 ವಿವಿಧ ಜಾತಿಯ ಚಿಟ್ಟೆಗಳು ಹಾರಾಡುತ್ತಿವೆ.

**ತಿಪಟೂರಿನಲ್ಲಿ ರೈತರ ಯಾವುದೇ ಮನವಿ, ಹೋರಾಟಗಳಿಗೆ ಸ್ಪಂದಿಸದ ರಾಜ್ಯ ಸರ್ಕಾರ ನಿರ್ಲಕ್ಷ ಧೋರಣೆಯಿಂದ ಸ್ಥಳೀಯ ಗೋಶಾಲೆಗಳನ್ನೆಲ್ಲಾ ಮುಚ್ಚಲಾಗಿದೆ. ರೈತರು ತಮ್ಮ ಗೋವುಗಳ ಪ್ರಾಣ ರಕ್ಷಣೆಗೆ ಪರದಾಡುತ್ತಿದ್ದ ಸಂದರ್ಭದಲ್ಲಿ ತಿಪಟೂರಿನ ಭಾರತೀಯ ಗೋಪರಿವಾರದ ಸದಸ್ಯ ವಿನಯ್ ಮಡನೂರು ತಮ್ಮದೇ ಜಮೀನಿನಲ್ಲಿ ನಡೆಸುತ್ತಿರುವ ಗೋಶಾಲೆಯಲ್ಲಿ ಈಗ ಸುತ್ತಲಿನ ಎಲ್ಲಾ ಹಳ್ಳಿಯ ಗೋವುಗಳಿಗೆ ಆಶ್ರಯ ನೀಡುತ್ತಿದ್ದಾರೆ. ಮೊದಲಿನಿಂದಲೂ ಅಶಕ್ತ ಗೋವುಗಳನ್ನು ತಂದು ತಮ್ಮ ಗೋಶಾಲೆಯಲ್ಲಿ ವಿನಯ್ ಸಾಕುತ್ತಿದ್ದರು. ಆದರೆ ಅವರು ಸುತ್ತಲಿನ ಹಳ್ಳಿಗಳ ಗೋವುಗಳ ರಕ್ಷಣೆಗೆ ಮುಂದಾದ ನಂತರ ದೊಡ್ಡ ಪ್ರಮಾಣದಲ್ಲಿ ಹಸುಗಳು ಬರಲು ಪ್ರಾರಂಭವಾಯಿತು. ಗೋಶಾಲೆಯ ನಿರ್ವಹಣೆ ಕಷ್ಟವಾದಾಗ ಅವರು ರಾಮಚಂದ್ರಾಪುರ ಮಠದ ಸಂಪರ್ಕ ಮಾಡಿದರು, ಈಗ ಮಠದ ಸಹಾಯದಿಂದ ಗೋಶಾಲೆಗೆ ಮೇವು ಲಭ್ಯವಾಗುತ್ತಿದೆ. ಇದಲ್ಲದೇ ಸುತ್ತಲಿನ ಎಲ್ಲಾ ರೈತರಿಗೆ ಗೋವುಗಳನ್ನು ಕಟುಕರಿಗೆ ನೀಡದೇ ಗೋಶಾಲೆಗೆ ಕಳಿಸುವಂತೆ ಪತ್ರಿಕೆಗಳಲ್ಲಿ ಸಾರ್ವಜನಿಕವಾಗಿ ಮನವಿಯನ್ನೂ ಮಾಡುತ್ತಿದ್ದಾರೆ.**



ಪ್ರಧಾನಿ ನರೇಂದ್ರ ಮೋದಿಯವರಿಗೆ ಇನ್ನು ಮುಂದೆ ಯಾರೂ ಹೂಗುಚ್ಛಗಳನ್ನು ಕೊಡುವಂತಿಲ್ಲವೆಂದು ಕೇಂದ್ರ ಗೃಹ ಇಲಾಖೆ ಆದೇಶ ಹೊರಡಿಸಿದೆ. ಶುಭಾಶಯ ಕೋರಲು ಖಾದಿ ಕರವಸ್ತ್ರ ಅಥವಾ ಒಂದು ಪುಸ್ತಕದೊಂದಿಗೆ ಒಂದು ಬಿಡಿ ಹೂವು ಕೊಡಬಹುದು ಎಂದು ಆದೇಶದಲ್ಲಿ ತಿಳಿಸಿದೆ. ಓದುವುದರಿಂದ ಆಗುವ ಲಾಭಗಳ ಬಗ್ಗೆ ಕಳೆದ ತಿಂಗಳು ಪ್ರಧಾನಿಯವರು ಒಂದು ಸಮಾರಂಭದಲ್ಲಿ ಮಾತನಾಡುತ್ತಾ, ಒಂದೆರಡು ದಿನಗಳಲ್ಲಿ ಹಾಳಾಗುವ ಹೂಗುಚ್ಛಗಳಿಗಿಂತ ಜನರು ಪುಸ್ತಕಗಳನ್ನು ಉಡುಗೊರೆಯಾಗಿ ಕೊಡುವುದನ್ನು ರೂಢಿಸಿಕೊಳ್ಳಲು ಸಲಹೆ ನೀಡಿದ್ದರು.

## ಸಾಲುದ್ದದ ಸುದ್ದಿಗಳು

**"ರಾಜ್ಯ ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿ ನೀತಿ ಅನುಸರಿಸುತ್ತಿದೆ ಎಂಬ ಬಿಜೆಪಿ ಆರೋಪಕ್ಕೆ ನಿಮ್ಮ ಸಹಮತ ಇದೆಯೇ?" ಎಂಬ ಪ್ರಶ್ನೆ ಇಟ್ಟುಕೊಂಡು ಪ್ರಸಿದ್ಧ ಕನ್ನಡ ದಿನಪತ್ರಿಕೆ ವಿಜಯ ಕರ್ನಾಟಕ ನಡೆಸಿದ ಸಮೀಕ್ಷೆಯಲ್ಲಿ ಶೇ 77ರಷ್ಟು ಜನರು ಹೌದು ಎಂದು ಉತ್ತರಿಸಿದ್ದಾರೆ. ಕರಾವಳಿಯ ಕೋಮುಗಲಭೆಯ ಸಮಯದಲ್ಲಿ ಸರ್ಕಾರದ ನೀತಿಯ ಹಿನ್ನೆಲೆಯಲ್ಲಿ ಪತ್ರಿಕೆ ಈ ಸಮೀಕ್ಷೆ ನಡೆಸಿತ್ತು.**




ಭಾರತದ ಮೊದಲ ಬಯೋಮೀಥೇನ್ ಬಸ್ಸನ್ನು ಟಾಟಾ ಸಂಸ್ಥೆ ಬಿಡುಗಡೆ ಮಾಡಿದೆ. ಗೋಬರ್ ಗ್ಯಾಸ್‌ನಂತೆ ಅಡುಗೆಮನೆಯ ಕಸದಿಂದ ಉತ್ಪತ್ತಿಯಾಗುವ ಮೀಥೇನ್ ಅನಿಲವನ್ನು ಸಿಲಿಂಡರಿನಲ್ಲಿ ಸಂಗ್ರಹಿಸಿ ಈ ಬಸ್ಸಿನಲ್ಲಿ ಉಪಯೋಗಿಸಬಹುದಾಗಿದೆ. ಈಗಾಗಲೇ ಪುಣೆಯಲ್ಲಿ ಕೆಲವು ಬಸ್‌ಗಳು ಓಡಾಡುತ್ತಿದ್ದು ಇತರ ನಗರಗಳಲ್ಲೂ ಇದನ್ನು ಪರಿಚಯಿಸುವ ಉದ್ದೇಶವನ್ನು ಟಾಟಾ ಸಂಸ್ಥೆ ಹೊಂದಿದೆ. ಸ್ಮಾರ್ಟ್ ಸಿಟಿಗಳಲ್ಲಿ ವಾಯುಮಾಲಿನ್ಯರಹಿತ ಸಾರಿಗೆ ಒದಗಿಸುವಲ್ಲಿ ಈ ಬಸ್‌ಗಳು ಮಹತ್ತ್ವದ ಪಾತ್ರ ವಹಿಸಲಿವೆ ಎಂದು ಸಂಸ್ಥೆ ತಿಳಿಸಿದೆ.

## ಉಗ್ರದಾಳಿಯ ನಡುವೆ ಸಮಯಪ್ರಜ್ಞೆ ಸಾಹಸ ತೋರಿದ ಚಾಲಕ–ನಿರ್ವಾಹಕರ ಜೋಡಿ

ಜಮ್ಮು ಕಾಶ್ಮೀರದ ಅನಂತನಾಗ್ ಜಿಲ್ಲೆಯ ಬಾಟೆಂಗೂ ಸಮೀಪ ಅಮರನಾಥ ಯಾತ್ರಿಗಳ ಮೇಲೆ ನಡೆದ ಗುಂಡಿನ ದಾಳಿಯಲ್ಲಿ 7 ಯಾತ್ರಾರ್ಥಿಗಳು ಅಸುನೀಗಿ, 14 ಮಂದಿ ಗಾಯಗೊಂಡರು. ಈ ಸಂದರ್ಭದಲ್ಲಿ ತಮ್ಮ ಪ್ರಾಣದ ಹಂಗನ್ನೇ ತೊರೆದು ಶೌರ್ಯ ಮೆರೆದ ಬಸ್ ಚಾಲಕ ಸಲೀಂ ಶೇಖ್ ಮತ್ತು ನಿರ್ವಾಹಕ ಹರ್ಷ ದೇಸಾಯಿ ಇನ್ನುಳಿದ 50 ಮಂದಿ ಪ್ರಯಾಣಿಕರ ಪ್ರಾಣ ಉಳಿಸಿದರು.

ಜುಲೈ 10ರ ರಾತ್ರಿ ಸುಮಾರು 8.20ರ ಕತ್ತಲಲ್ಲಿ ಇದ್ದಕ್ಕಿದ್ದಂತೆ ಸೇನಾ ಸಮವಸ್ತ್ರದಲ್ಲಿದ್ದ ಭಯೋತ್ಪಾದಕರು, ಬಸ್ಸಿನತ್ತ ಮುನ್ನುಗ್ಗಿ, ಗುಂಡಿನ ದಾಳಿ ಆರಂಭಿಸುತ್ತಿದ್ದಂತೆ, ಇದು ಸೈನಿಕರಲ್ಲ ಉಗ್ರಗಾಮಿಗಳೆಂದು ಮನಗಂಡು ಸಮಯ ಪ್ರಜ್ಞೆ ತೋರಿಸಿದ ನಿರ್ವಾಹಕ ಹರ್ಷ್ ದೇಸಾಯಿ, ಮುನ್ನುಗ್ಗಿ ಬಸ್‌ನ ಬಾಗಿಲನ್ನು ಭದ್ರಪಡಿಸಿ, ಗಾಬರಿಗೊಂಡಿದ್ದ ಚಾಲಕ ಸಲೀಮನನ್ನು ಬಸ್ ನಿಲ್ಲಿಸದೆ ಮುನ್ನುಗ್ಗಿಸುವಂತೆ ನಿರ್ದೇಶಿಸಿದರು. ಬಾಗಿಲು ಭದ್ರಪಡಿಸುವ ಸಮಯದಲ್ಲಿ ಗುಂಡೇಟು ತಗಲಿದರೂ ವಿಚಲಿತನಾಗದೆ ಹರ್ಷ್ ದೇಸಾಯಿ, ತೆವಳುತ್ತಾ ಸಾಗಿ, ಚಾಲಕ ಸಲೀಮರನ್ನೂ ಎಳೆದುಕೊಳ್ಳುವುದರ ಮೂಲಕ ಆತನಿಗಾಗಬಹುದಾದ ಜೀವಾಪಾಯ ತಪ್ಪಿಸಿ, ಏನೇ ಆದರೂ ಬಸ್ ನಿಲ್ಲಿಸದೆ ಮುನ್ನುಗ್ಗಿಸುವುದೊಂದೇ ತಮಗಿರುವ ಮಾರ್ಗ, ಸೇನಾ ನೆಲೆ ಅಥವಾ ಜನ ಜೀವನ ಕಾಣುವ ತನಕ ನಿಲ್ಲಿಸದೆ ಮುನ್ನಡೆಸುವಂತೆ ಧೈರ್ಯ ತುಂಬಿದರು. ಆಗಷ್ಟೇ ನಿದ್ರೆಗೆ ಜಾರಿದ್ದ ಪ್ರಯಾಣಿಕರು ಎಚ್ಚರಗೊಂಡು ಏನಾಯಿತೆಂದು ಅರಿಯದೆ ಭಯಭೀತರಾಗಿ ಚೀರಾಟ ಆರಂಭಿಸಿದರು. ಆದರೂ ಧೃತಿಗೆಡದ ಹರ್ಷ್ ಸಲೀಂ ಜೋಡಿ ಬಸ್‌ನ ಮುಂದಿನ ಗಾಜು ಪುಡಿಯಾಗಿದ್ದರೂ, ತಮ್ಮ ಜೀವದ ಹಂಗು ತೊರೆದು, ಸುರಕ್ಷಿತ ಜಾಗವನ್ನು ಅರಸುತ್ತಾ ಬಸ್‌ನ್ನು ಸುಮಾರು 2.5ಕಿ.ಮೀ.ವರೆಗೆ ವೇಗವಾಗಿ ಬಸ್ ಚಲಿಸಿಕೊಂಡು ಹೋಗಿ ಸೇನಾ ಶಿಬಿರವೊಂದರ ಬಳಿ ನಿಲ್ಲಿಸಿ ನಡೆಯಬಹುದಾಗಿದ್ದ ಬಹುದೊಡ್ಡ ನರಮೇಧ ತಪ್ಪಿಸಿದ್ದಾರೆ.



ಮೂರೂ ಕಡೆಯಿಂದ ಬಸ್‌ನ ಮೇಲೆ ನಿರಂತರ ದಾಳಿ ನಿರಂತರವಾಗಿ ನಡೆಯುತ್ತಿದ್ದರೂ ಧೈರ್ಯ ಮತ್ತು ಸಮಯಪ್ರಜ್ಞೆಯಿಂದ ಬಸ್ಸನ್ನು ಮುನ್ನಡೆಸಿ ಸುರಕ್ಷಿತ ಸ್ಥಳ ತಲುಪಿಸಿ 50 ಜನರ ಪ್ರಾಣ ಉಳಿಸಿದ ಹರ್ಷ ಮತ್ತು ಸಲೀಂ ಸಾಹಸಕ್ಕೆ ಎಲ್ಲೆಡೆಯಿಂದ ಶ್ಲಾಘನೆ ವ್ಯಕ್ತವಾಗಿದೆ.

## ಕೈದಿಗಳ ಮನಃಪರಿವರ್ತನೆಗೆ ವಿನೂತನ ಕ್ರಮ

ಜೈಲುಶಿಕ್ಷೆಯ ವೇಳೆ ಮನಸ್ಸು ಬದಲಾಗಿದ್ದರೂ, ಸಮಾಜ ಅಂತಹವರನ್ನು ಒಪ್ಪಿಕೊಳ್ಳುವುದು ಕಷ್ಟದ ಮಾತು. ಆದರೆ ತೆಲಂಗಾಣ ರಾಜ್ಯ ಬಂಧೀಖಾನೆ ಇಲಾಖೆ ದೇಶದಲ್ಲೇ ಮೊದಲ ಬಾರಿ ಎನ್ನುವಂತೆ, ಮಾಜಿ ಮಹಿಳಾ ಕೈದಿಗಳಿಗಾಗಿ ಹೈದರಾಬಾದಿನಲ್ಲಿ ಪೆಟ್ರೋಲ್ ಪಂಪ್ ಒಂದನ್ನು ತೆರೆದಿದೆ. ಅಷ್ಟೇ ಅಲ್ಲದೆ, ರಾಜ್ಯದ ವಿವಿಧ ಭಾಗಗಳಲ್ಲಿ ಇಲಾಖೆ 10 ಪೆಟ್ರೋಲ್ ಪಂಪುಗಳನ್ನು ಹೊಂದಿದೆ. ಅಲ್ಲಿ ಪುರುಷ ಕೈದಿಗಳು ಕೆಲಸ ಮಾಡುತ್ತಿದ್ದಾರೆ.

ಈ ಪಂಪುಗಳು ವಾರ್ಷಿಕ ಸುಮಾರು 300 ಕೋಟಿ ರೂಪಾಯಿ ವಹಿವಾಟು ನಡೆಸುತ್ತಿವೆ. ಜೈಲಿನಿಂದ ಪರಾರಿಯಾಗುವ ಯತ್ನ ಮಾಡದೇ ಇರುವ ಕೈದಿಗಳಿಗೆ ಈ ವ್ಯವಸ್ಥೆ ಮಾಡಿಕೊಡಲಾಗಿದೆ. ಜೈಲು ಶಿಕ್ಷೆ ಅನುಭವಿಸುತ್ತಿರುವ ಕೈದಿಗಳು ಸರಕಾರದ ಈ ಕೆಲಸದಿಂದ ಮನಸ್ಸು ಬದಲಿಸಿಕೊಳ್ಳಲಿ ಎನ್ನುವ ಯೋಚನೆಯಿಂದ ಇದನ್ನು ಜಾರಿಗೆ ತರಲಾಗಿದೆ.



**ಅಸ್ಸಾಮಿನ ಲಕ್ಷ್ಮಿಪುರ ಜಿಲ್ಲೆಯ ಹೈಟಿಲಂಗ್ ಗ್ರಾಮದಲ್ಲಿ ಇತ್ತೀಚೆಗೆ ಭೀಕರ ಮಳೆಯಿಂದಾಗಿ ಪ್ರವಾಹ ಉಂಟಾಯಿತು. ಹತ್ತಿರದ ಅಣೆಕಟ್ಟೆಯಿಂದ ಒಮ್ಮೆಗೇ ನೀರು ಬಿಟ್ಟಿದ್ದರಿಂದ ಅನೇಕ ಗ್ರಾಮಸ್ಥರ ನೀರಿನಲ್ಲಿ ಸಿಕ್ಕಿಹಾಕಿಕೊಂಡರು. ವಿಷಯ ತಿಳಿದ ಪಿಂಕಿ ಗೋಗೋಯಿ ಮತ್ತು ಪೂಜಾ ಗೋಗೋಯಿ ಎಂಬ ಇಬ್ಬರು ಹುಡುಗಿಯರು ತಮ್ಮ ಬಳಿಯಿದ್ದ ಬಾಳೆದಿಂಡಿನ ತೆಪ್ಪವನ್ನು ತೆಗೆದುಕೊಂಡು ಪ್ರವಾಹದ ಮಧ್ಯದಲ್ಲೇ ತಕ್ಷಣವೇ ಸಿಕ್ಕಿಹಾಕಿಕೊಂಡಿದ್ದವರ ಬಳಿಗೆ ತೆರಳಿದರು. ಒಮ್ಮೆಗೆ 4–5 ಜನರಂತೆ ಅವರನ್ನೆಲ್ಲಾ ಸುರಕ್ಷಿತ ಸ್ಥಳಕ್ಕೆ ತಲುಪಿಸಿದರು. ಹೀಗೆ ಇವರಿಬ್ಬರು ಸೇರಿ ಒಟ್ಟು ರಕ್ಷಿಸಿದವರ ಸಂಖ್ಯೆ ಬರೋಬ್ಬರಿ 30! ವಯಸ್ಸಿನಲ್ಲಿ ಚಿಕ್ಕವರಾದರೂ ತಮ್ಮ ಜೀವದ ಹಂಗು ತೊರೆದು ಇತರರನ್ನು ರಕ್ಷಿಸಿದ ಇವರ ಹೆಸರು ಶೌರ್ಯ ಪ್ರಶಸ್ತಿಗೆ ಶಿಫಾರಸುಗೊಳ್ಳಲಿದೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.**



ಮಕ್ಕಳ ಶಾಲಾ ಬ್ಯಾಗ್ ಭಾರದ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ತೆಲಂಗಾಣಾ ಸರ್ಕಾರ ಇನ್ನು ಮುಂದೆ ಪಠ್ಯಪುಸ್ತಕಗಳ ತೂಕ ಮಿತಿಯನ್ನು ದಾಟಬಾರದು ಎಂದು ಸುತ್ತೋಲೆ ಹೊರಡಿಸಿದೆ. 1 ಮತ್ತು 2ನೇ ತರಗತಿಗಯ ಮಕ್ಕಳ ಪುಸ್ತಕದ ತೂಪ 1.5 ಕೆ.ಜಿ.ಗಿಂತ ಹೆಚ್ಚು ಇರಬಾರದು, 3–5ನೇ ತರಗತಿಗೆ 3 ಕೆ.ಜಿ. 6–7ನೇ ತರಗತಿಯ ಪುಸ್ತಕಗಳು 4 ಕೆ.ಜಿ. ದಾಟಬಾರದು, ಇನ್ನು 10ನೇ ತರಗತಿಯ ಮಕ್ಕಳ ಪುಸ್ತಕ ಭಾರ 5ಕೇಜಿ ದಾಟಬಾರದು ಎಂದು ಮಿತಿ ಹಾಕಿದೆ. ಒಂದು ಅಧ್ಯಯನದ ಪ್ರಕಾರ ಪ್ರಾಥಮಿಕ ಶಾಲಾ ಮಕ್ಕಳು 6–12 ಕೆ.ಜಿ. ತೂಕದ ಬ್ಯಾಗನ್ನು ಹೊರುತ್ತಿದ್ದಾರೆ, ಪ್ರೌಢಶಾಲೆಯ ಮಕ್ಕಳು ಬರೋಬ್ಬರಿ 17 ಕೆ.ಜಿ. ತೂಕವನ್ನು ಹೊರುತ್ತಿದ್ದಾರೆ. ಇದರಿಂದ ಮಕ್ಕಳ ದೈಹಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ.



**2026ರ ವೇಳಗೆ ಭಾರತದ ಹಾಲು ಉತ್ಪಾದನೆ ಶೇ 49ರಷ್ಟು ಏರಿಕೆಯಾಗಲಿದ್ದು ವಿಶ್ವದಲ್ಲೇ ಅತಿ ಹೆಚ್ಚು ಹಾಲು ಉತ್ಪಾದಸುವ ದೇಶವಾಗಲಿದೆ ಎಂದು ವಿಶ್ವಸಂಸ್ಥೆ ಮತ್ತು ಓಇಸಿಡಿ (ಆರ್ಥಿಕ ಮತ್ತು ಅಭಿವೃದ್ಧಿ ಸಂಸ್ಥೆ)ಯ ವರದಿ ಹೇಳಿದೆ. ಓಇಸಿಡಿ –ಎಫ್‌ಏಓ (ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ) ವರದಿಯಲ್ಲಿ ಇದೇ ಅವಧಿಯಲ್ಲಿ ವಿಶ್ವದ ಜನಸಂಖ್ಯೆಯು 7.3 ಶತಕೋಟಿಯಿಂದ 8.2ಶತಕೋಟಿಗೆ ಏರಿಕೆಯಾಗಲಿದ್ದು ಭಾರತ ಮತ್ತು ಸಬ್‌ಸಹಾರನ್ ಆಫ್ರಿಕ ದೇಶಗಳಲ್ಲಿ ಶೇ 56ರಷ್ಟು ಜನಸಂಖ್ಯಾ ವೃದ್ಧಿಯಾಗಲಿದೆ ಎಂದು ಹೇಳಿದೆ. ಹಾಗೆಯೇ ಭಾರತದ ಜನಸಂಖ್ಯೆಯು 150 ದಶಲಕ್ಷದಷ್ಟು ಏರಿಕೆ ಕಾಣಲಿದ್ದು ಚೀನಾವನ್ನು ಹಿಂದಿಕ್ಕಿ ಭಾರತ ವಿಶ್ವದ ಅತಿಹೆಚ್ಚು ಜನಸಂಖ್ಯೆ ಉಳ್ಳ ದೇಶವಾಗಲಿದೆ.**

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10th and 25th of every Month REG.NO.CPMG/KA/BGS/102/2015-17
FORTNIGHTLY 1-8-2017



# ಭಾರತವನ್ನು ಪರಿಕ್ರಮಿಸಿದ ಯಾತ್ರೆ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕ ಸೀತಾರಾಮ ಕೆದಿಲಾಯರವರು ಆಗಸ್ಟ್ 9, 2012ರಂದು ಶ್ರೀಕೃಷ್ಣ ಜನ್ಮಾಷ್ಟಮಿಯ ದಿನ ಕನ್ಯಾಕುಮಾರಿಯಿಂದ ಆರಂಭಿಸಿದ ಕಾಲ್ನಡಿಯಲ್ಲಿ ಭಾರತವನ್ನು ಸುತ್ತುಹಾಕುವ 'ಭಾರತ ಪರಿಕ್ರಮ ಯಾತ್ರೆ' ಐದು ವರ್ಷಗಳ ನಂತರ ಗುರುಪೂರ್ಣಿಮೆ ದಿನ 9 ಜುಲೈ 2017ರಂದು ಅದೇ ಕನ್ಯಾಕುಮಾರಿಯ ತಟದಲ್ಲಿ ಅಂತ್ಯಗೊಂಡಿತು. ಯಾತ್ರೆಯ ಕಡೆಯ ನಡಿಗೆ ಕನ್ಯಾಕುಮಾರಿಯ ವಿವೇಕಾನಂದ ಸ್ಮಾರಕದಿಂದ ಆರಂಭಗೊಂಡು ಕನ್ಯಾಕುಮಾರಿ ದೇವಸ್ಥಾನದಲ್ಲಿ ಮುಕ್ತಾಯಗೊಂಡಿತು. ಆರೆಸ್ಸೆಸ್‌ನ ಸರಸಂಘಚಾಲಕ ಮೋಹನ್ ಭಾಗವತ್, ಸಹ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಮೊದಲಾದವರು ಸಮಾರೋಪದಲ್ಲಿ ಉಪಸ್ಥಿತರಿದ್ದರು.

ಅದೇ ದಿನದಂದು ಭಾರತವನ್ನು ವಿಶ್ವಗುರುವನ್ನಾಗಿಸಲು ಕೋರುವ ವಿಶ್ವಜಿಗೀಶು ಯಾಗವನ್ನು ಮಾಡಲಾಯಿತು 'ಭಾರತವನ್ನು ತಿಳಿ, ಭಾರತವೇ ಆಗಿ, ಭಾರತವನ್ನು ವಿಶ್ವಗುರುವನ್ನಾಗಿಸು' ಎಂಬ ಧ್ಯೇಯದೊಂದಿಗೆ 68 ವರ್ಷದ ಸೀತಾರಾಮ ಕೆದಿಲಾಯರು ಐದು ವರ್ಷಗಳ ಹಿಂದೆ ಭಾರತ ಪರಿಕ್ರಮ ಯಾತ್ರೆಯನ್ನು ಕೈಗೊಂಡರು. ಗ್ರಾಮೀಣ ಭಾರತದ ಪುನರುತ್ಥಾನದ ಮೂಲಕ ಭಾರತವನ್ನು ಮತ್ತೆ ಜಗದ್ಗುರುವನ್ನಾಗಿಸುವ ಮಹಾನ್ ಸಂಕಲ್ಪ ತೊಟ್ಟು ಹೊರಟ ಯಾತ್ರೆ ಕೃಷಿ ಸಂರಕ್ಷಣೆ, ಗೋ-ಪಾಲನೆ, ಪರಿಸರ, ಗ್ರಾಮದ ಜೀವ ವೈವಿಧ್ಯ ರಕ್ಷಣೆ, ಪಾರಂಪರಿಕ ಆರೋಗ್ಯ ರಕ್ಷಣಾ ಪದ್ಧತಿ, ಜಲಸಂಪನ್ಮೂಲ ಉಳಿಸುವಿಕೆ, ಕಲೆ ಕ್ರೀಡಾ ಸಂಸ್ಕೃತಿಯ ರಕ್ಷಣೆ, ಪರಂಪರಾಗತ ಗುಡಿ ಕೈಗಾರಿಕೆ ಅಭಿವೃದ್ಧಿ ಮೊದಲಾದ ವಿಷಯಗಳ ಸಂದೇಶವನ್ನು ತನ್ನ ಜೊತೆಯಲ್ಲಿ ಹರಡಿತು.

ಪ್ರತಿಹಳ್ಳಿಯಲ್ಲೂ ಅಲ್ಲಿನ ಪ್ರಮುಖರನ್ನು ಭೇಟಿಯಾದ ಸೀತಾರಾಮ ಕೆದಿಲಾಯರು ಅವರ ಸಮಸ್ಯೆಗಳನ್ನು ಆಲಿಸಿ ಸಂಬಂಧಪಟ್ಟವರಿಗೆ ಪತ್ರ




ಬರೆದಿದ್ದಾರೆ. ದಿನಕ್ಕೆ ಸರಾಸರಿ 12 ಕಿ.ಮೀ. ನಡೆಯುತ್ತಿದ್ದ ಕೆದಿಲಾಯರು ಹಳ್ಳಿಯಲ್ಲಿನ ಯುವಜನತೆಯಲ್ಲಿ ದೇಶಪ್ರೇಮದ ಕಂಪನ್ನು ಹಾಗೂ ರಾಷ್ಟ್ರೀಯ ಚಿಂತನೆಯನ್ನು ಬಿತ್ತಿದ್ದಾರೆ. 1797 ದಿನಗಳ ಈ ಬೃಹತ್ ಪರಿಕ್ರಮ ಯಾತ್ರೆಯಲ್ಲಿ ಸೀತಾರಾಮ ಕೆದಿಲಾಯರು ಭಾರತದ 23 ರಾಜ್ಯಗಳ 2350 ಹಳ್ಳಿಗಳಿಗೆ ಭೇಟಿ ನೀಡಿದ್ದು 23,100 ಕಿ.ಮೀ. ದೂರವನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿದ್ದಾರೆ.

# ಕೋಮುಗಲಭೆ : ಸರ್ಕಾರದ ಇಬ್ಬಗೆ ನೀತಿಯ ಕೂಸು

**ಹಿಂಸಾಚಾರಗಳು ನಡೆದಾಗ ಕಠಿಣ ಕ್ರಮ ತೆಗೆದುಕೊಳ್ಳಬೇಕಾದುದು ಜವಾಬ್ದಾರಿಯುತ ಸರ್ಕಾರದ ಆದ್ಯ ಕರ್ತವ್ಯವೇ. ಆದರೆ ಸರ್ಕಾರವೇ ಬಹಿರಂಗವಾಗಿ ಹಿಂಸಾಚಾರ ನಿರತ ಒಂದು ಸಮಾಜದ ಪರವಾಗಿ ನಿಂತಲ್ಲಿ ನಡೆಯಬಹುದಾದ ಅನಾಹುತಗಳನ್ನು ಪಶ್ಚಿಮ ಬಂಗಾಳ ಮತ್ತು ಕರ್ನಾಟಕದ ಕರಾವಳಿಯ ಗಲಭೆ ಸ್ಪಷ್ಟ ಉದಾಹರಣೆಯಾಗಿ ನಮ್ಮ ಮುಂದೆ ನಿಲ್ಲುತ್ತದೆ.**

## ಬಂಗಾಳದಲ್ಲಿ ಹಿಂದುವಿಗೆ ಬೆಲೆಯಿಲ್ಲ!

ಬದಲಾವಣೆಯ ಹೆಸರಿನಲ್ಲಿ ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬಂದ ಮಮತಾ ಬ್ಯಾನರ್ಜಿ ಆಡಳಿತದಲ್ಲಿ ಕೋಮುಗಲಭೆಗಳು ಎಗ್ಗಿಲ್ಲದೇ ನಡೆಯುತ್ತಿವೆ. ಕಳೆದ ಜುಲೈ 1ರಂದು ವಿದ್ಯಾರ್ಥಿಯೊಬ್ಬ ಸಾಮಾಜಿಕ ಜಾಲತಾಣದಲ್ಲಿ ಹಾಕಿದ ಪೋಸ್ಟ್‌ನ್ನೇ ಕಾರಣವಾಗಿಟ್ಟು ಪಶ್ಚಿಮ ಬಂಗಾಳದ ಬಡೂರಿಯಾ ಮತ್ತು ಉತ್ತರ 24 ಪರಗಣ ಜಿಲ್ಲೆಯಲ್ಲಿ ಮುಸಲ್ಮಾನರು ದಂಗೆ ಹಲ್ಲೆ ನಡೆಸಿದರು. ಹಲ್ಲೆಯಲ್ಲಿ ಓರ್ವ ಆರೆಸ್ಸೆಸ್ ಕಾರ್ಯಕರ್ತ ಮೃತಪಟ್ಟಿದ್ದು, 20 ಪೊಲೀಸರು ಸೇರಿದಂತೆ ಒಟ್ಟು 25 ಜನರು ಗಾಯಗೊಂಡಿದ್ದಾರೆ. 12 ಪೊಲೀಸ್ ವಾಹನಗಳು ಬೆಂಕಿಗೆ ಆಹುತಿಯಾಗಿದ್ದು ಗಲಭೆಯ ನೆಪದಲ್ಲಿ ಹತ್ತಾರು ಹಿಂದುಗಳ ಮನೆಗಳನ್ನು ದರೋಡೆ ಮಾಡಲಾಗಿದೆ. ಆದರೆ ಹಲ್ಲೆಯನ್ನು ನಿಯಂತ್ರಿಸಬೇಕಿದ್ದ ಪ. ಬಂಗಾಳ ಸರ್ಕಾರ ಹಲ್ಲೆಕೋರರ ಪರವಾಗಿ ನಿಂತಿತು. ಪರಿಣಾಮ ಬಹುಸಂಖ್ಯಾತ ಹಿಂದುಗಳ ಮನೆ ಅಂಗಡಿ ಮುಂಗಟ್ಟುಗಳು ಧ್ವಂಸಗೊಂಡವು. ಈ ಸಂಗತಿಗಳು ಹೊರಬರದಂತೆ ವ್ಯವಸ್ಥಿತವಾಗಿ ಮಾಧ್ಯಮಗಳನ್ನು ದೂರವಿಡಲಾಯಿತು. ಘಟನೆಯನ್ನು ನಿಯಂತ್ರಿಸಲು ಬೇಕಾದ ಅಗತ್ಯ ನೆರವು ನೀಡಲು ಕರೆ ಮಾಡಿದ ಕೇಂದ್ರ ಗೃಹ ಸಚಿವರು ಹಾಗೂ ರಾಜ್ಯಪಾಲರ ಮೇಲೆಯೇ ಸ್ವತಃ ಮುಖ್ಯಮಂತ್ರಿಯೇ ಆಕ್ರೋಶ ವ್ಯಕ್ತಪಡಿಸಿ ಮಾಧ್ಯಮಗಳಲಿ ಹೇಳಿಕೆ ನೀಡಿದರು!

ಇದಕ್ಕೆ ಪ್ರಮುಖ ಕಾರಣ ಮುಸಲ್ಮಾನ್ ಓಲೈಕೆ ರಾಜಕಾರಣ. ಪ. ಬಂಗಾಳದಲ್ಲಿ ಮುಸ್ಲಿಂ ಮತದಾರರ ಸಂಖ್ಯೆ ಶೇ. 27ರಷ್ಟು., ಬಾಂಗ್ಲಾ ದೇಶದಿಂದ ಬಂದಿರುವ ವಲಸಿಗರನ್ನು ಸೇರಿಸಿದರೆ ಈ ಸಂಖ್ಯೆ ಶೇ. 30 ದಾಟಲಿದೆ. ದೇಶದಾದ್ಯಂತ ಬಿಜೆಪಿಯ ಜನಪ್ರಿಯತೆಯಿಂದ ಕಂಗೆಟ್ಟಿರುವ ಮಮತಾ ಸರ್ಕಾರ ಬಹಿರಂಗವಾಗಿ ಮುಸಲ್ಮಾನ ಸಮುದಾಯದ ಓಲೈಕೆಯಲ್ಲಿ ತೊಡಗಿದೆ. ಇದಕ್ಕಾಗಿ ಇನ್ನಿಲ್ಲದ ಕಸರತ್ತು ನಡೆಸುತ್ತಿದೆ. ಆಳುವ ಸರ್ಕಾರದ ಬಹಿರಂಗ ಬೆಂಬಲವಿರುವುದರಿಂದ ಮುಸ್ಲಿಂ ಮತೀಯವಾದಿಗಳು ಹಿಂದೂಗಳ ಮೇಲೆ ಅವ್ಯಾಹತವಾಗಿ ಆಕ್ರಮಣ ನಡೆಸುತ್ತಿದ್ದಾರೆ. ಇದರ ಪರಿಣಾಮವಾಗಿ ಮಮತಾ ಬ್ಯಾನರ್ಜಿ ಸರ್ಕಾರ ಆಡಳಿತಕ್ಕೆ ಬಂದ ಬಳಿಕ ಪಶ್ಚಿಮ ಬಂಗಾಳದಲ್ಲಿ 6 ವರ್ಷಗಳಲ್ಲಿ 40ಕ್ಕೂ ಹೆಚ್ಚು ಗಲಭೆಗಳಾಗಿವೆ.

ಇದೀಗ ಪೊಲೀಸರು ಬಂಧನದಲ್ಲಿರುವ ಫೇಸ್‌ಬುಕ್‌ನಲ್ಲಿ ವಿವಾದಾತ್ಮಕ ಚಿತ್ರ ಹಾಕಿದ್ದಾನೆ ಎನ್ನಲಾಗುವ ಯುವಕ ತನ್ನ ಮೊಬೈಲ್ ಸಿಮ್ ತಿಂಗಳ ಹಿಂದೆಯೇ ಕಳೆದುಹೋಗಿದ್ದು, ಅದನ್ನು ಯಾರೋ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ತಿಳಿಸಿದ್ದಾನೆ. ಇದಕ್ಕೂ ಒಂದು ವಾರದ ಮೊದಲಷ್ಟೇ ಯುವಕನೊಬ್ಬ ಪೋಸ್ಟ್ ಹಾಕಿದ ನೆಪದಲ್ಲಿ ಭೀರ್‌ಬೂಮ್ ಮಹಮ್ಮದ್ ಬಜಾರ್‌ನಲ್ಲಿ ಹಾಗೂ ಶಾಲಾ ಶಿಕ್ಷಕರೊಬ್ಬರು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದ ಪೋಸ್ಟ್‌ನಿಂದ ಜೂನ್ 14ರಂದು ಮಾಲ್ಡಾದ ಹರಿಶ್ಚಂದ್ರಪುರದಲ್ಲಿ ಗಲಾಟೆಯಾಗಿತ್ತು. ಕಳೆದ 1 ತಿಂಗಳ ಅವಧಿಯಲ್ಲಿ ಇಂತಹ ಏಳಕ್ಕೂ ಅಧಿಕ ಸಣ್ಣಪುಟ್ಟ ಗಲಭೆಗಳು ನಡೆದಿವೆ. ಈ ಎಲ್ಲ ಸಂದರ್ಭಗಳಲ್ಲಿ ಧಂಗೆಕೋರರ ಮೇಲೆ ಕ್ರಮ ಕೈಗೊಳ್ಳಬೇಕಿದ್ದ ಸರ್ಕಾರ ಹಿಂದು ಮುಖಂಡರ ಮೇಲೆ ಕೇಸುಗಳನ್ನು ದಾಖಲಿಸಿ ಇಬ್ಬಗೆಯ ನೀತಿ ಅನುಸರಿಸುತ್ತಿದೆ.

- 2016 ಡಿಸೆಂಬರ್ 13ರಂದು ಹೌರಾ ಸಮೀಪದ ಧುಲಾಘರ್‌ನಲ್ಲಿ ನಡೆದ ಗಲಭೆ ದೇಶವನ್ನೇ ಬೆಚ್ಚಿ ಬೀಳುವಂತೆ ಮಾಡಿತು. ಈದ್‌ವಿಲಾದ್ ನೆಪದಲ್ಲಿ ಹುಟ್ಟಿಕೊಂಡ ಗಲಭೆ 4 ದಿನಗಳ ಕಾಲ ಮುಂದುವರಿದು, ನೂರಾರು ಮನೆಗಳು, ಅಂಗಡಿ ಮುಂಗಟ್ಟುಗಳು ನೆಲಕ್ಕುರುಳಿದವು. ಹಿಂದುಗಳ ಮನೆಗಳ ಮೇಲೆ ನಾಡ ಬಾಂಬ್‌ಗಳಿಂದ ದಾಳಿ ನಡೆಸಲಾಯಿತು. ಗಲಭೆಯಿಂದ ನೂರಾರು ಹಿಂದುಗಳು ಮನೆ ಕಳೆದುಕೊಂಡು ಬೀದಿಗೆ ಬಿದ್ದರೂ, ಪಶ್ಚಿಮ ಬಂಗಾಳ ಸರ್ಕಾರ ಸಹಾಯಕ್ಕೆ ಧಾವಿಸುವುದಿರಲಿ, ಯಾವ ಗಲಭೆಯೂ ನಡೆದೇ ಇಲ್ಲ ಎಂದು ತಿಪ್ಪೆ ಸಾರಿಸಲು ಹೊರಟಿತು. ವರದಿ ಮಾಡಲು ಬಂದ ಪತ್ರಕರ್ತರ ಮೇಲೆಯೇ ಕೇಸು ದಾಖಲಿಸಿತು.
- 2016 ಅಕ್ಟೋಬರ್ 16ರಂದು ಉತ್ತರ 24 ಪರಗಣ ಜಿಲ್ಲೆಯ ಹಾಜೀನಗರದಲ್ಲಿ ಗಲಭೆಯುಂಟಾಗಿ 30ಕ್ಕೂ ಹೆಚ್ಚು ಕುಟುಂಬಗಳು ಮನೆ ಕಳೆದುಕೊಂಡವು. ಬರ್ಧಮಾನ ಜಿಲ್ಲೆಯ ಕಟವಾದಲ್ಲಿನ ಗಲಭೆ ಸಂದರ್ಭದಲ್ಲಿ ಶನಿ ದೇವಾಲಯದ ಮೇಲೆ ದಾಳಿ ನಡೆಸಲಾಯಿತು. ಅಪ್ರಾಪ್ತೆಯ ಮೇಲೆ ಅತ್ಯಾಚಾರ ಎಸಗಲಾಯಿತು.
- ಏಷ್ಯಾ ಕಪ್ ಕ್ರಿಕೆಟ್‌ನಲ್ಲಿ ಭಾರತ ಪಾಕಿಸ್ತಾನವನ್ನು (2016 ಮಾರ್ಚ್) ಸೋಲಿಸಿದ್ದನ್ನೆ ಕಾರಣವನ್ನಾಗಿಟ್ಟುಕೊಂಡು ಇಲ್ಲುಮ್‌ಜಾರ್‌ನಲ್ಲಿ ಗಲಾಟೆ ಆರಂಭವಾಯಿತು. ಪೊಲೀಸ್ ಠಾಣೆಗೆ ಬೆಂಕಿ ಹಚ್ಚಲಾಯಿತು. ಹೆದ್ದಾರಿ ಸ್ಥಗಿತಗೊಳಿಸಿ ನೂರಾರು ವಾಹನಗಳನ್ನು ಬೆಂಕಿಗಾಹುತಿ ಮಾಡಲಾಯಿತು. ಮಾಲ್ಡಾ ಜಿಲ್ಲೆಯ ಕಾಲಿಯಚಕ್‌ನಲ್ಲಿ ನಡೆದ ಗಲಾಟೆಯಲ್ಲಿ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಲಾಯಿತು. ರಕ್ಷಣೆಗೆ ಬಂದ ಬಿಎಸ್‌ಎಫ್ ಪಡೆಯ ವಾಹನಗಳನ್ನೂ ಸುಟ್ಟು ಹಾಕಲಾಯಿತು. ಇದರಲ್ಲಿ 30ಕ್ಕೂ ಹೆಚ್ಚು ಪೊಲೀಸರು ಗಾಯಗೊಂಡಿದ್ದರು.
- ನವರಾತ್ರಿಯ ಸಮಯದಲ್ಲಿ ಬಂಗಾಳದ ಶಾಲೆಗಳಲ್ಲಿ ನಡೆಯುತ್ತಿದ್ದ ಸರಸ್ವತೀ ಪೂಜೆಗೆ ನಿರ್ಬಂಧ ಹೇರಿದ ದೀದಿ ಸರ್ಕಾರ, ಇನ್ನೊಂದೆಡೆ ಎಲ್ಲಾ ಶಾಲೆಗಳಲ್ಲಿ ಮಿಲಾನ್-ಉನ್-ನಬಿ (ಪೈಗಂಬರ್ ಜನ್ಮದಿನ) ಆಚರಿಸುವಂತೆ ಸರ್ಕ್ಯುಲರ್ ಹೊರಡಿಸಿದೆ. ಮಾತ್ರವಲ್ಲ ರಾಜ್ಯದ ಹನ್ನೆರಡು ಜಿಲ್ಲೆಗಳಲ್ಲಿ ಉರ್ದುವನ್ನು ದ್ವಿತೀಯ ಆಡಳಿತ ಭಾಷೆಯನ್ನಾಗಿ ಮಾಡಿರುವ ಮಮತಾ ಸರ್ಕಾರ ಅರೇಬಿಕ್ ಕಾಲೇಜು ಮತ್ತು ವಿಶ್ವವಿದ್ಯಾಲಯಗಳನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸಲು ಯೋಜನೆ ಸಿದ್ಧಪಡಿಸಿದೆ.
- ರಾಜ್ಯಸರ್ಕಾರ ಸಿದ್ಧಪಡಿಸುತ್ತಿರುವ ಪಾಠ್ಯಪುಸ್ತಕಗಳಲ್ಲಂತೂ ಇಸ್ಲಾಂನ ಹೇರುವಿಕೆ ಎದ್ದುಕಾಣುತ್ತಿದೆ. ಶಾಲಾಮಕ್ಕಳಿಗೆ ತಂದೆ ತಾಯಿ, ಚಿಕ್ಕಪ್ಪ, ಅತ್ತೆ ಇತ್ಯಾದಿ ಸಂಬಂಧಗಳನ್ನು ಹಾಗೂ ಅನೇಕ ಬಂಗಾಳಿ ಹೆಸರುಗಳನ್ನು {ಉದಾ: ಕಾಮನಬಿಲ್ಲಿಗೆ ಬಂಗಾಳಿಯಲ್ಲಿ 'ರಾಂಧೋನು' (ರಾಮನ ಬಿಲ್ಲು) ಎಂಬುದನ್ನು 'ಆಸಮಾನಿ ಧೋನು' (ಆಗಸದ ಬಿಲ್ಲು)} ಎಂದು ಬದಲಿಸಿ ಅರೇಬಿಕ್ ಹೆಸರುಗಳನ್ನು ನಮೋದಿಸಿ ಅದರಂತೆಯೇ ಪಾಠಪ್ರವಚನಗಳನ್ನು ನಡೆಸುವಂತೆ ಹೇಳಲಾಗುತ್ತಿದೆ.
- ರಾಜ್ಯ ಸರ್ಕಾರದ ವತಿಯಿಂದ ಎಲ್ಲಾ ಇಮಾಮರಿಗೆ ಮತ್ತು ಅವರ ಸಹಾಯಕರಿಗೆ (ಮುಜೀನ) ಪ್ರತಿ ತಿಂಗಳೂ 6ರಿಂದ 10 ಸಾವಿರದವರೆಗೆ ತಿಂಗಳ ಭತ್ಯೆ ನೀಡಲು ಮುಸ್ಲಿಂ ಮಮತಾ ಆದೇಶ ಹೊರಡಿಸಿದರು. ಕೋಲ್ಕತಾ ಹೈಕೋರ್ಟ್ ರಾಜ್ಯಸರ್ಕಾರದ ಆದೇಶ ಸಂವಿಧಾನದ ಆಶಯಗಳಿಗೆ ವಿರುದ್ಧ ಎಂದು ರದ್ದುಗೊಳಿಸಿತು. ಆದರೆ ವಾಮಮಾರ್ಗ ಅನುಸರಿಸಿದ ಸರ್ಕಾರ ರಾಜ್ಯದ ಅಲ್ಪಸಂಖ್ಯಾತ ಖಾತೆಯ ಮೂಲಕ ವಕ್ಫ್ ಬೋರ್ಡ್‌ಗೆ ಈ ಹಣವನ್ನು ನೀಡಿ, ಅದರ ಮೂಲಕ ಇಮಾಮರಿಗೆ ಮತ್ತು ಮುಜೀನರಿಗೆ ತಿಂಗಳ ಭತ್ಯೆಯಾಗಿ ವಿತರಿಸುತ್ತಿದೆ. ಪ್ರಸ್ತುತ 32,000 ಮಸೀದಿಗಳ 55,000ಕ್ಕೂ ಹೆಚ್ಚು ಇಮಾಮರು ಮತ್ತು ಮುಜೀನರು ದೇಶದ ತೆರಿಗೆದಾರರ ಹಣದಿಂದ ತಿಂಗಳ ಭತ್ಯೆಯನ್ನು ಪಡೆಯುತ್ತಿದ್ದಾರೆ. ಇಷ್ಟಲ್ಲದೆ ಮಸೀದಿಯ ಸ್ವಚ್ಛತಾ ಸಿಬ್ಬಂದಿಗೆಂದು ಪ್ರತಿ ತಿಂಗಳೂ ಸಾವಿರ ರೂಪಾಯಿಗಳನ್ನು ನಿಗದಿಗೊಳಿಸಿದೆ.
- ಪಶ್ಚಿಮ ಬಂಗಾಳದಲ್ಲಿ ನವರಾತ್ರಿ ಮತ್ತು ರಾಮನವಮಿಯನ್ನು ಅದ್ದೂರಿಯಾಗಿ ಆಚರಿಸಲಾಗುತ್ತದೆ. ಆದರೆ ಕಳೆದ ವರ್ಷ ಮಮತಾ ಸರ್ಕಾರ ದುರ್ಗಾಮೂರ್ತಿಯ ವಿಸರ್ಜನೆಗೆ ನಿರ್ಬಂಧ ಹೇರಿತು. ಕೊನೆಗೆ ಕೋಲ್ಕತಾ ಹೈಕೋರ್ಟ್‌ನ ಅನುಮತಿ ಪಡೆದು ರಾಮನವಮಿಯ ಪ್ರಯುಕ್ತ ರಾಜ್ಯದಾದ್ಯಂತ 150ಕ್ಕೂ ಹೆಚ್ಚು ಬೃಹತ್ ಶೋಭಾಯಾತ್ರೆಗಳನ್ನು ನಡೆಸಲಾಯಿತು. ಇದನ್ನು ಸಹಿಸದ ಮಮತಾ ಬಿಜೆಪಿ ಮತ್ತು ಆರೆಸ್ಸೆಸ್‌ನ ಪ್ರಮುಖರ ಮೇಲೆ ಕೇಸುಗಳನ್ನು ದಾಖಲಿಸಿದರು. ಆದರೆ ಮುಸಲ್ಮಾನರು ಪ್ರತ್ಯಕ್ಷ ದಂಗೆಗಳಲ್ಲಿ ತೊಡಗಿದ್ದರೂ ಜಾಣಕುರುಡನ್ನು ಪ್ರದರ್ಶಿಸುತ್ತಿದ್ದಾರೆ.

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.